# ಅಪರಂಜಿ

ತಿಳಿನಗೆಯ ಕಾರಂಜಿ

ಮೇ - 2015



**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎ.ಆರ್. ರಾಜಗೋಪಾಲ್

**ಟ್ರಸ್ಟಿಗಳು**

ಶ್ರೀ ಎಂ. ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ವಿ.ಆರ್. ನಾಥ್

ಶ್ರೀ ಕೆ. ರವೀಂದ್ರ ರಾವ್

**ಗೌರವ ಸಲಹೆಗಾರರು**

ಶ್ರೀ ಅ.ರಾ.ಸೇ.

ಶ್ರೀ ಆರ್. ಶೇಷಗಿರಿರಾವ್



**ಚಂದಾ ವಿವರ:**

ಬಿಡಿ ಪ್ರತಿ: ರೂ. 10/-

ವಾರ್ಷಿಕ ಚಂದಾ: ರೂ. 100/-

ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ




# ಅಪರಂಜಿ

ತಿಳಿನಗೆಯ ಕಾರಂಜಿ


ಸಂಪುಟ 32

ಸಂಚಿಕೆ - 8

ಮೇ - 2015


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನೆಚ್ಚಿನ ಅ.ರಾ.ಸೇ. | **ಶಿವಕುಮಾರ್** | 3 |
| ಕವಿ ಕಾವ್ಯ ಜೀವನ | **ಅ.ರಾ.ಸೇ.** | 6 |
| ತುಂತುರು | **ದಂನಾಆ** | 12 |
| ಮಂಗಳ - ಅಮಂಗಳ | **ವೈ.ವಿ. ಗುಂಡೂರಾವ್** | 13 |
| ಐಪೀಎಲ್ ವೀರರು.... | **ಎಚ್.ಆರ್. ಹನುಮಂತ ರಾವ್** | 18 |
| ಹೈಟೆಕ್.... | **ಎಚ್. ಗೋಪಾಲಕೃಷ್ಣ** | 22 |
| ನಗರದಲ್ಲಿ ಸಗಣಿ ಸ್ಫೋಟ | **ಹಾ.ಮ್ಯ. ಸೂರಿ** | 26 |
| ಬ್ಯಾಡ್ ಬಾಸ್‌ಗಳ ಬಗ್ಗೆ | **ನಂನಾಗ್ರಾಜ್** | 28 |
| ಹಲ್ಲಿನ ಪ್ರಕರಣ | **ಎಸ್.ಎನ್. ಸುಬ್ಬರಾವ್** | 30 |
| ಚಿನ್ನದ ಪೆನ್ನಿಂದ ಬರೆದ... | **ಡಾ|| ರುದ್ರಯ್ಯ ವಿ.** | 32 |
| ಲೆಕ್ಕವೇಕೆ ಅಕ್ಕರೆಗೆ | **ಬೇಲೂರು ರಾಮಮೂರ್ತಿ** | 36 |
| ತೂತಿಲ್ಲದ ದೋಸೆ | | 38 |
| ಸೆಲೂನಿನಲೊಂದು ಸೆಲ್ಫಿ... | **ಪ್ರಶಾಂತ ಅಡೂರ** | 39 |



*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com



*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಸಂಪೂರ್ಣ ಸ್ವದೇಶೀಯ ಸಲ್ ಮೆರೀನ್ 'ಸ್ಕಾ ರ್ಕಿ ಯನ್' – ಸುದ್ದಿ

**● ಅದು ಎಂದೂ ತೇಲದಿರಲಿ !!**

★★★

ಗಣಿತ ಪರೀಕ್ಷೆಯಲ್ಲಿ ನಕಲಿಗೆ ಯತ್ನ – ಪತ್ರಿಕೆ

**● ಲೆಕ್ಕಾಚಾರ ತಪ್ಪಿದಂತಿದೆ !!**

★★★

ನ್ಯೂಜಿಲೆಂಡ್‌ಗೆ ಭಾರತದ ಮಹಿಳಾ ಹಾಕಿ ತಂಡ – ಕ್ರೀಡಾ ಸುದ್ದಿ

**● *Cheque*ದೇ ಇಂಡಿಯ ಅನ್ನಬಹುದೆ ?!**

★★★

ಗ್ರೀನ್ – ಪೀಸ್ ಇಂಡಿಯಾದ ಹೆಸರನ್ನು

ಗ್ರೀನ್ – ವಾರ್ ಅಂತ ಬದಲಿಸುವುದಿಲ್ಲವಂತೆ !!

★★★

ಆದಿರು ಪ್ರಮಾಣ ಅರಿಯಲು ಅಸಡ್ಡೆ; ಸುಪ್ರೀಂ ಕೋಪ – ಪತ್ರಿಕೆ

**● ರಾಜ್ಯದ ವಕೀಲರು ಅದರಿದರಂತೆ !!**

★★★

'ಕನ್ನಡ ಕಾಪಾಡು ಕನ್ನಡಿಗರಿಂದ' – ಶ್ರೀ ಲಕ್ಷ್ಮಣರಾವ್ ಹೇಳಿಕೆ

**● ರಾಮ, ರಾಮ !!**

★★★

ಜೈಲಿನ ಹೆಬ್ಬಾಗಿಲಿಂದಲೇ ಕೈದಿ ಪರಾರಿ – ಸುದ್ದಿ

**● ಇದರ ಬಗ್ಗೆ ಸಿನಿಮಾ ಮಾಡುವುದು ಖಚಿತವಲ್ಲವಂತೆ !!**

★★★

ತಮಿಳುನಾಡು ಸಮುದ್ರದ ನೀರನ್ನು ಸಂಸ್ಕರಿಸಿ ಬಳಸಬೇಕು

– ಸುಬ್ರಮಣಿಯನ್ ಸ್ವಾಮಿ

**● ತಮಿಳು ರಾಣಿಯ ಕಣ್ಣು ಕೆಂಪಾಯಿತಂತೆ !!**

★★★

**ನಮ್ಮನ್ನೆಲ್ಲಾ ನಲಿಸಿದ ಮುಗಿಲು ಹಳ್ಳಿಯ ಚೇತನಕ್ಕೆ**

**ಅಪರಂಜಿಯ ವಿದಾಯ !!**

★★★

# ನಮ್ಮ ಮೆಚ್ಚಿನ ಅ.ರಾ.ಸೇ.

**ನೆನಪಿಸಿಕೊಂಡವರು : ಶಿವಕುಮಾರ್**



**ಕ**ನ್ನಡ ಸಾಹಿತ್ಯದ ಹಾಸ್ಯ ಮತ್ತು ಆಧ್ಯಾತ್ಮ ಎರಡೂ ಪ್ರಕಾರಗಳಲ್ಲಿ ತುಂಬು ಪ್ರತಿಭೆಯಿಂದ ಕೃಷಿ ಮಾಡಿ ತಮ್ಮ ಬರಹಗಳಿಂದ ಹಾಸ್ಯ ಪ್ರಜ್ಞೆ ಎಂಬ ಪದಕ್ಕೆ ಒಂದು ಮೂಲ ಮಾನದಂಡವನ್ನು, ಆಧ್ಯಾತ್ಮಿಕ ತಿಳಿವಿಗೆ ಒಂದು ಹೊಸ ಸರಳತೆಯನ್ನು ಸೃಷ್ಟಿಸಿದ ನಮ್ಮೆಲ್ಲರ ಪ್ರೀತಿಯ ಅ.ರಾ.ಸೇ. ಇನ್ನಿಲ್ಲ. ಅರಾಸೇ (ಅ.ರಾ. ಸೇತೂರಾಮರಾವ್) 1931ರ ಜನವರಿ ಇಪ್ಪತ್ತಾರರಂದು ಚಿತ್ರದುರ್ಗದ ಹತ್ತಿರದ ಭರಮಸಾಗರದಲ್ಲಿ ಹುಟ್ಟಿ, ತಮ್ಮ ಜೀವಿತದ ಬಹುಭಾಗವನ್ನು ಅಲ್ಲಿ ಕಳೆದಿದ್ದರು. ವೃತ್ತಿಯಲ್ಲಿ ಅಧ್ಯಾಪಕರಾಗಿದ್ದ ಅರಾಸೇ, ತಮ್ಮ ಲೇಖನ ವ್ಯವಸಾಯವನ್ನು ಪ್ರಾರಂಭಿಸಿದ್ದೇ ಕೊರವಂಜಿ ಪತ್ರಿಕೆಯ ಮೂಲಕ ಎನ್ನಬಹುದು. 1954ರ ಮೇ ತಿಂಗಳ ಸಂಚಿಕೆಯಲ್ಲಿ ಅವರ ''ಯದ್ಭವಿಷ್ಯ'' ಎಂಬ ಮೊದಲ ಬರಹ (ಕವನ) ಕೊರವಂಜಿಯಲ್ಲಿ ಬೆಳಕು ಕಂಡಿತು. ಅಲ್ಲಿಂದ ಮುಂದೆ 1967ರಲ್ಲಿ ಕೊರವಂಜಿ ನಿಲ್ಲುವವರೆಗೂ ನಿರಂತರವಾಗಿ ತಮ್ಮದೇ ಆದ ವಿಶಿಷ್ಟ ಛಾಪಿನ ಹಾಸ್ಯದೌತಣವನ್ನು ಅರಾಸೇ ಕನ್ನಡ ಓದುಗರಿಗೆ ನೀಡುತ್ತಾ ಬಂದರು.

ಅಪಾರವಾದ ಓದು, ತಿಳಿವು ಇವುಗಳ ಹಿನ್ನೆಲೆಯನ್ನು ಅರಾಸೇ ಅವರ ಹಾಸ್ಯದಲ್ಲಿ ಗುರುತಿಸಬಹುದಾಗಿತ್ತು. ಪೂಜ್ಯ ಡಿ.ವಿ.ಜಿ. ಅವರು ಬರೆದಿದ್ದ ''ಉಮರನ ಒಸಗೆ'' ಧಾಟಿಯಲ್ಲಿ ಇವರು ''ಅರಾಸೇಯ ಒಸಗೆ''ಯನ್ನು ಕೊರವಂಜಿಗೆ ಬರೆದಿದ್ದರು. ಅದರಲ್ಲಿ ತಮ್ಮ ಜೀವನ ದರ್ಶನವನ್ನು ಬಹು ಸರಳವಾಗಿ ಚಿತ್ರಿಸಿರುವುದನ್ನು ಇಲ್ಲಿ ನೋಡಿ..

*ಬಾಲ್ಯದಲಿ ನಾನಂದು ಕಾಲೇಜಿನೊಳಗಿರಲು*
*ಕೇಳಿ ಪ್ರೊಫೆಸರುಗಳೆಲ್ಲರ ಬುರುಡೆಗಳನು*
*ಪೀಸಿಯಮ್ಮಿನಲಿ ಪಲ್ಟಿಯ ಹೊಡೆದು, ಹಿಂತಿರುಗಿ*
*ಬೆಂಗಳೂರಿಗೆ ಬಂದೆ ಮಂಗನಾಗಿ*

*ಮತ್ತೆ ಸೆಪ್ಟೆಂಬರಿಗೆ ಕೂತೆ ಅಲ್ಲಿಯೂ ಸೋತೆ*
*ಬರಿದಾಯ್ತು ಜೇಬು, ಬರಡಾಯ್ತು ಬುದ್ಧಿ*
*ಕತ್ತೆಯಾದೆನು ಬಳಿಕ ಹೊಳೆಯಿತೆನಗೂ ಸತ್ಯ*
*ಕಾಫಿ ಪುಡಿಯೊಲು ಬಂದೆ ಚರಟದೊಲು ಪೋಪೆ*

ಅರಾಸೇ ಅವರ ಬರಹ ಕಾರಿಡಾರ್ ಕ್ರಿಕೆಟ್ ಸದಾ ನೆನಪಿನಲ್ಲಿ ಉಳಿದಿರುವ ನಗೆ ಲೇಖನ. ಇದರಲ್ಲಿ ''ಮಿತ್ರ'' ನೊಬ್ಬ ತಾನು ಕಂಡ ವಿದ್ಯುಲ್ಲತಾಕ್ಷಿಯ ಮೇಲೆ ರಚಿಸಿರುವ ಕವನದ ಸಾಲುಗಳು ಹೀಗಿವೆ.

*ಓ ಲತಾಂಗಿಯೆ ಕೇಳು ನಾನು ಕವಿ ಒರಟ*
*ನಿನಗಾಗಿ ಹೊಲಿಸಿದೆನು ಹಳದಿ ಬುಷ್ಷರಟ*
*ನೀನಿಲ್ಲದಿರೆ ಬಾಳು ಕೊಬರಿಯಿಲ್ಲದ ಕರಟ*
*ಹುಳಿಹಿಂಡಿ ಬಳಿಕುಳಿದ ಹುಣಸೆಹಣ್ಣಿನ ಚರಟ*

ಅರಾಸೇ ತಮ್ಮ ಬರಹಗಳಿಗೆ ಆರಿಸದ ವಸ್ತುವಿಲ್ಲ. ಮಧ್ಯಂತರ ಕವಿ ವಿಚಾರ, ಅ.ಕ.ವಿ.ಪ್ರೇ.ಪ. (ಅಖಿಲ ಕರ್ನಾಟಕ ವಿಫಲ ಪ್ರೇಮಿಜನ ಪರಿಷತ್), ಶೀನಣ್ಣನ ಸಮಗ್ರ ವೃತ್ತಾಂತ, ಕ್ರಿಕೆಟ್ ಸಂಭ್ರಮ, ಇವೆಲ್ಲವೂ ಅರಾಸೇ ಅವರ ಪ್ರತಿಭೆಯ ಮೂಸೆಯಿಂದ ಹೊರಬಂದಾಗ ಅಪರಂಜಿ ಚಿನ್ನದಂತೆ ಹಾಸ್ಯಲೇಪದಿಂದ ಹೊಳೆಯುತ್ತಿದ್ದವು. ಒಮ್ಮೆ ಖ್ಯಾತ ಕಾದಂಬರಿಕಾರ್ತಿ ಶ್ರೀಮತಿ ತ್ರಿವೇಣಿ ಅವರು ಕೊರವಂಜಿಗೆ ಪತ್ರವೊಂದನ್ನು ಬರೆದು ''ಹಿಂದಿನ ಕೊರವಂಜಿ ಸಂಚಿಕೆಗಳಲ್ಲಿ ತುಂಬಾ ನಗು ಬರಿಸುವಂತಹ 'ರಂಗಪ್ಪ ಮತ್ತು ರಾವಣಭಾತ್' ತರಹದ ಲೇಖನಗಳಿರುತ್ತಿದ್ದವು. ಈಗಿನ ಕೊರವಂಜಿ ಸಂಚಿಕೆಗಳಲ್ಲಿ ಕೇವಲ ರಾಜಕೀಯ ವಿಡಂಬನೆಗಳಿವೆ. ಇಂತಹ ಲೇಖನಗಳನ್ನು ಓದಿದರೆ ನಗು ಬರುವುದಿಲ್ಲ'' ಅಂತ ಬರೆದಿದ್ದರು. ಅದರ ಮುಂದಿನ ಸಂಚಿಕೆಯಲ್ಲಿ ಅರಾಸೇ ಅವರ ಲೇಖನ ''ಮಾಲಕ್ಷ್ಮಕ್ಕ ಶಾವಿಗೆ ಮಾಡಿದ್ದು'' ಎಂಬ ಲೇಖನ ಪ್ರಕಟವಾಯಿತು. ಲೇಖನದ ಪ್ರಾರಂಭದಲ್ಲೇ ಅರಾಸೇ ಹೀಗೆ ಬರೆಯುತ್ತಾರೆ.

''ರಾವಣಭಾತಿನ ರುಚಿಯನ್ನೇ ಬಯಸಿದ ತ್ರಿವೇಣಿಯವರಿಗೂ ಸಪ್ಪೆ ಶಾವಿಗೆ ಬಯಸಿದ ಮಾಲಕ್ಷ್ಮಕ್ಕನಿಗೂ ಹತ್ತಿರದ ಹೋಲಿಕೆ ಇದೆ. ಮಾಲಕ್ಷ್ಮಕ್ಕನಿಗೂ (ತ್ರಿವೇಣಿಯವರಂತೆ) ರಾಜಕೀಯದಲ್ಲಿ ಆಸಕ್ತಿ ಇಲ್ಲ. ಅವರಂತೆಯೇ ಇವಳಿಗೂ ಕೊರವಂಜಿಯನ್ನು ಓದಿದರೆ ನಗು ಬರುವುದಿಲ್ಲ. ಆದರೆ ಮಾಲಕ್ಷ್ಮಕ್ಕ ಮನೋವಿಶ್ಲೇಷಣಾತ್ಮಕ ಕಾದಂಬರಿಗಳನ್ನು ಬರೆಯುವುದಿಲ್ಲವಲ್ಲ? ಎಂದರೆ ತ್ರಿವೇಣಿಯವರಿಗೆ ಮಾಲಕ್ಷ್ಮಕ್ಕನ ಹಾಗೆ ಶಾವಿಗೆ ಮಾಡುವುದಕ್ಕೆ ಬರುವುದಿಲ್ಲವಲ್ಲ....''

ಇಂತಹ ಕಚಗುಳಿಯಿಡುವ ಚಿಂತನಾ ತರಂಗಗಳು ಅರಾಸೇ ಅವರ ಲೇಖನಿಯಿಂದ ಮೂಡಿಬರುತ್ತಿದ್ದವು.

ನಮ್ಮ ತಂದೆ ರಾ.ಶಿ. ಅವರಿಗೆ ಅರಾಸೇ ತುಂಬಾ ಅಚ್ಚುಮೆಚ್ಚು. ಅರಾಸೇ ಅವರ ''ಸುಳಿನಗು'' ಎಂಬ ನಗೆಬರಹಗಳ ಸಂಕಲನಕ್ಕೆ ರಾ.ಶಿ. ಅವರು ತಮ್ಮ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ.

''ಪಾಶ್ಚಾತ್ಯ ಭಾಷೆಗಳಲ್ಲಿ - ಅಥವಾ ತಮಿಳು ತೆಲುಗು ಭಾಷೆಗಳಲ್ಲಾದರೂ ನಿನ್ನಂತಹ ನಗು ಮನೋಧರ್ಮದ ಪ್ರಚಂಡನಿಗೆ - ಶ್ರೀಯೂ ಯಶಸ್ಸೂ, ಶ್ರೇಯಸ್ಸೂ ದೊರೆಯುತ್ತಿತ್ತು. ಇದನ್ನು ನೆನೆಸಿಕೊಂಡು ನಗು. ನಕ್ಕು ಹಾಡು. ಕನ್ನಡವೆನೆ ಎನ್ನೆದೆ ಕುಣಿದಾಡುವುದು. ಅದಕ್ಕೇ ಕನ್ನಡದಲ್ಲಿ ಕೊರಗುತ್ತ ಹಾಸ್ಯದ ಲೇಖನಗಳನ್ನು ಬರಿ. ಸುಂದರವಾಗುತ್ತವೆ ಅವು.''

ಅರಾಸೇ ಅವರ ಆಸಕ್ತಿ ಹಾಸ್ಯಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಆಧ್ಯಾತ್ಮ ವ್ಯಾಸಂಗದತ್ತ ಅವರು ತಮ್ಮ ಒಲವನ್ನು ಮೊದಲಿನಿಂದ ಬೆಳೆಸಿಕೊಂಡು ಬಂದಿದ್ದರು. ಕನ್ನಡ ಭಗವದ್ಗೀತೆ, ಮಹಲಿಂಗರಂಗ ಕವಿಯ ಅನುಭವಾಮೃತಕ್ಕೆ ತಾತ್ಪರ್ಯ, ಶ್ರೀ ಶಂಕರಲಿಂಗ ಭಗವಾನ್ ಸರಸ್ವತಿ ಪರಮಹಂಸರ ಜೀವನ ಚರಿತ್ರೆಯಾದ ಶ್ರೀಗುರು ಕಥಾಮೃತ, ತುಂಬಿಗೆರೆಯ ಶ್ರೀ ಬ್ರಹ್ಮಾನಂದರ ವೃತ್ತಾಂತ, ಸುಂದರಕಾಂಡ, ಈ ಹಲವು ಪುಸ್ತಕಗಳು ಅರಾಸೇಯವರ ಪ್ರತಿಭೆ ಹಾಗೂ ಆಳವಾದ ಆಧ್ಯಾತ್ಮ ಜ್ಞಾನವನ್ನು ಬಿಂಬಿಸುತ್ತವೆ. ಕುಮಾರವ್ಯಾಸನು ರಚಿಸಿರುವ ಕರ್ನಾಟ ಭಾರತ ಕಥಾಮಂಜರಿಯ ಎಲ್ಲ ಶ್ಲೋಕಗಳಿಗೆ ವಿವರವಾದ ತಾತ್ಪರ್ಯವನ್ನು ಬರೆದು ಪ್ರಕಟಿಸಿರುವ ''ತಾತ್ಪರ್ಯ ಸಹಿತ ಕುಮಾರವ್ಯಾಸ ಭಾರತ'' ಅರಾಸೇಯವರು ರಚಿಸಿರುವ ಮೇರುಕೃತಿ ಎಂದು ಹೇಳಬಹುದು. 1300 ಪುಟಗಳನ್ನು ಮಿಕ್ಕಿದ ಈ ಪುಸ್ತಕ ರಚನಾ ಕಾರ್ಯದಲ್ಲಿ ಅನೇಕ ವರ್ಷಗಳ ಕಾಲ ಅತ್ಯಂತ ಶ್ರದ್ಧೆಯಿಂದ ಅರಾಸೇ ತಮ್ಮನ್ನು ತೊಡಗಿಸಿಕೊಂಡದ್ದನ್ನು ನಾನು ನೋಡಿದ್ದೇನೆ. ಅರಾಸೇ ಬರೆದಿರುವ ''ಪರಮಾರ್ಥ ಪದಕೋಶ'' ಆಧ್ಯಾತ್ಮ ವ್ಯಾಸಂಗವನ್ನು ಕೈಗೊಂಡಿರುವ ಎಲ್ಲ ಮುಮುಕ್ಷುಗಳಿಗೆ ಒಂದು ದಾರಿದೀವಿಗೆ.

ಇಪ್ಪತ್ತೈದು ವರ್ಷಗಳಕಾಲ ನಗೆ ರಸಿಕರನ್ನು ರಂಜಿಸಿ ಕೊರವಂಜಿ ಕಾಡಿಗೆ ತೆರಳಿದ ಬಳಿಕ ಹಲವು ಕಾಲ ಜನರ ಓದಿಗೆ ಹಾಸ್ಯ ಸಾಹಿತ್ಯವಿಲ್ಲದಿರುವ ಕೊರತೆ ಕಾಣಿಸಿತು. ಇದನ್ನು ನೀಗಲು ಅರಾಸೇ ಮುಂದೆ ಬಂದರು. ತಮ್ಮ ಗೆಳೆಯ ಹಾಗೂ ಅಧ್ಯಾಪಕರಾಗಿದ್ದ ಶ್ರೀ ಆರ್. ಶೇಷಗಿರಿರಾವ್ ಅವರ ಜೊತೆಗೂಡಿ, ರಾ.ಶಿ. ಅವರ ಆಶೀರ್ವಾದವನ್ನು ಪಡೆದು ಇವರು ಚಿತ್ರದುರ್ಗದಲ್ಲಿ ಅಪರಂಜಿ ನಗೆ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. 1983ರ ಅಕ್ಟೋಬರಿನಂದು ಅಪರಂಜಿಯ ಮೊದಲ ಸಂಚಿಕೆ ಬಿಡುಗಡೆಯಾಯಿತು. ಹಲವು ತಿಂಗಳುಗಳು ಚಿತ್ರದುರ್ಗದಿಂದ ಹೊರಬರುತ್ತಿದ್ದ ಅಪರಂಜಿ, ವ್ಯಾವಹಾರಿಕ ಕಾರಣಗಳಿಂದ ಬೆಂಗಳೂರಿಗೆ ಬದಲಾಯಿತು. ಅದರ ಸಂಪಾದಕತ್ವವನ್ನು ನಾನು ವಹಿಸಿಕೊಳ್ಳಬೇಕಾಯಿತು. ಅರಾಸೇ ನಮಗೆಲ್ಲಾ ಮಾರ್ಗದರ್ಶಕರಾಗಿ ನಿಂತರು. ಅರಾಸೇ ಅವರ ಮಾರ್ಗದರ್ಶನದಲ್ಲಿ ಅಪರಂಜಿ ಈಗ ತನ್ನ ಮೂವತ್ತೆರಡನೆಯ ವರ್ಷಕ್ಕೆ ಕಾಲಿಟ್ಟಿದ್ದಾಳೆ. ಇದಕ್ಕೆ ಮುಖ್ಯವಾಗಿ ಅರಾಸೇ ಅವರ ಆಶೀರ್ವಾದ ಹಾಗೂ ಮಾರ್ಗದರ್ಶನವೇ ಕಾರಣ. ಅಗಲಿರುವ ನಮ್ಮ ನೆಚ್ಚಿನ ಅರಾಸೇಗೆ ಅಪರಂಜಿ ಬಳಗದ ಎಲ್ಲರ ಪರವಾಗಿ ಇದೊಂದು ಅಶ್ರು ತರ್ಪಣ.

# ಕವಿ ಕಾವ್ಯ ಜೀವನ

**- ಅ.ರಾ.ಸೇ.**

*Life is one sweet-grand song* ಎಂದು ಯಾವನೋ ಕವಿ ಪುಂಗವನೋ, ಕವಿಕುಲ ಲಲಾಮನೊ, ಕಾವ್ಯ ವನಮತ್ತೇಭನೋ ಹೇಳಿದ್ದಾನಂತೆ. ಜೀವನ ಕಾವ್ಯಮಯವಾದಷ್ಟೂ ಸುಸಂಸ್ಕೃತವಾಗುತ್ತದೆ. ಸಿನಿಮಾಗಳನ್ನು ಸಂಸ್ಕೃತಿ ಪ್ರಕಾರ ಸಾಧನಗಳನ್ನಾಗಿ ಮಾಡಿಕೊಳ್ಳಬೇಕು. ಏಕೆಂದರೆ ನಮ್ಮ ಇಂದಿನ ಸಿನಿಮಾ ಪ್ರಪಂಚ ಕಾವ್ಯಮಯವಾಗಿದೆ.

ಷೇಕ್ಸ್‌ಪಿಯರೇನಾದರೂ ದಾರಿತಪ್ಪಿ ಭಾರತೀಯ ಚಲನಚಿತ್ರ ಮಂದಿರಕ್ಕೆ ನುಗ್ಗಿದ್ದರೆ ಅವನು ಕಾವ್ಯ ಬರೆಯುವುದನ್ನೇ ಬಿಟ್ಟು ಬಿಡುತ್ತಿದ್ದ. ಆಗ ನನ್ನಂತಹ ಬಡಪಾಯಿಗಳು ಕಾವ್ಯವನ್ನು *As I like it* ಓದುತ್ತಿದ್ದೆವು ಇಲ್ಲ ಬಿಡುತ್ತಿದ್ದೆವು.

ಹೀಗೆಲ್ಲಾ ನಾನು ಹೇಳುವುದಕ್ಕೆ ಒಂದು ಕಾರಣವಿದೆ. ನಮ್ಮ ಸಿನಿಮಾ ಗೀತೆಗಳನ್ನು ಕೇಳಿ ನನಗೆ ಆನಂದಾಧಿಕ್ಯವಾಗಿದೆ. ಹಾ-ಊ, ಹಾ-ಊ-ಹಾ ಎಂದು ಬ್ರಹ್ಮ ಸಾಕ್ಷಾತ್ಕಾರ ಮಾಡಿಕೊಂಡವರು ಕೂಗುತ್ತಾರೆ ಎಂದು ಮುಂಡಕೋಪ ನಿಷತ್ತಿನಲ್ಲಿಯೋ, ಮಾಂಡೂಕ್ಯದಲ್ಲಿಯೋ ಯಾರೋ ಬರೆದಿದ್ದಾರೆ. ಕ್ಷಮ್ಸಿ - ತಪ್ಪಾಯ್ತು ಹಾಗೆ ಹೇಳಿದ್ದು. ಅದು ಸಂತೋಷಿಯವರ ಲೇಟೆಸ್ಟ್ ಪಿಕ್ಚರೂಂತ ಕಾಣುತ್ತೆ. ಅದು ಏನಾದರೂ ಆಗಿರಲಿ ಸಿನಿಮಾ ನೋಡಿಕೊಂಡು ಬಂದು ನಾನು ಹಾಗೇ ಕೂಗುತ್ತೇನೆ. ಸಿಟ್ಟೋ ಸಂತೋಷವೋ ಅರಿಯೆ.

ಹಾಗೇ ಪರಿಶೀಲನೆ ಮಾಡಿ ನೋಡಿ:-

(1) ನೋಡಿ, ಒಬ್ಬಳು ಮನೆಯ ಒಕ್ಕಲಗಿತ್ತಿ, ಬಡಾ ಬಡಪಾಯಿಯವಳು (ಉಟ್ಟಿದ್ದು ವಾಯಿಲ್ ಸೀರೆ!) ಅಂಥಾವಳು ಇದ್ದಕ್ಕಿದ್ದಂತೆ ಸಂತೋಷಾಧಿಕ್ಯದಿಂದಲೋ, ದುಃಖಭಾರದಿಂದಲೋ ಹಾಡಲಾರಂಭಿಸಿದಳು. ಆಶು ಕವಿಯಿತ್ರಿಯವಳು. ರಾಮ್‌ಜೋಷಿ, ರಾಘವಾಂಕ ಮೊದಲಾದವರೆಲ್ಲಾ ಈ ರಜತ ಪರದೆಯ ರಂಭೆಯ ಮುಂದೆ ಒಂದು ರವೆಯಷ್ಟೂ ಇಲ್ಲ. ಅವಳು ಹಾಡು ಹೇಳುವುದನ್ನು ಪತ್ತೆ ಹಚ್ಚಿ ಯಾವುದೋ ಆರ್ಕೆಸ್ಟ್ರಾದವರು ಎಲ್ಲಿಂದಲೋ ಮೂಡಿ, ಕಾಮೆಟ್ಟಿನಿಂದಲೋ, ರಾಕೆಟ್ಟಿನಿಂದಲೋ ಶಬ್ದಕ್ಕಿಂತ ವೇಗವಾಗಿ ಹಾರಿಬಂದು ಹಾಜರಾಗಿ ಅವಳ ಆಶು ಕವಿತ್ವಕ್ಕೆ, ಆಶುಟ್ಯೂನ್‌ಗಳನ್ನು ಹಾಕಿಕೊಂಡು ಹಾರ್ಮೋನಿಯಂ ತಬಲಾಗಳನ್ನು ಬಡಿದರು. ಇದನ್ನು ಅದು ಹೇಗೆ ಪತ್ತೆಹಚ್ಚಿದರೋ ಅರಿಯೆ ಅವರು ಷೆರ್ಲಾಕ್ ಹೋಮ್ಸಿನ ಅಜ್ಜಗಳಿರಬೇಕು. ಆ ಸಿನಿಮಾ ತಯಾರಕರು ಆ ಸ್ಥಳಕ್ಕೆ ಧಾವಿಸಿ ಈ ಘಟನೆಗಳನ್ನು ಆದ್ಯಂತ ಪುಣ್ಯಕಾಲವೂ ಸಿನಿಮಾ ತೆಗೆದರು.

ನಾನೂ ಕವಿಯೇ. ದಿನಗಟ್ಟಲೆ ಬರೆದು ಅಳಿಸಿದರೂ ಹತ್ತು ಸಾಲಿಗೆ ಪ್ರಾಸ ಹತ್ತುವುದಿಲ್ಲ. ಅಲ್ಲದೆ ಸಿನಿಮಾ ಭಾರತೀಯರ ಕಾವ್ಯದಗಣಿಯಲ್ಲಿ ನಾನೊಂದು ಅಣು. ಆದುದರಿಂದಲೇ ಪ್ರಾಸ, ಗಾನಮಾಧುರ್ಯಗಳನ್ನು ಮರೆತು ಮಹಾ ಛಂದಸ್ಸಿನಲ್ಲಿ ಬರೆಯುತ್ತಿದ್ದೇನೆ. ಯಾರಿಗೂ ಹೇಳಬೇಡಿ ನಾನು ಬರೆದುದೆಲ್ಲಾ ಭಸ್ಮವಾದೀತು.

2) ಇನ್ನೊಂದು ಸಂದರ್ಭ ಹೃದಯವಿದ್ರಾವಕವಾದದು: ಕಡ್ಡಿ ಕಮಂಗಿ ಹಾಗಿರುವ ಹೀರೋವನ್ನು ಮೀಸೆಧಾಂಡಿಗ ಖಳನಾಯಕ ಜೈಲಿಗೆ ಕಳಿಸಿದ್ದಾನೆ. ಆ ಸುದ್ದಿಯನ್ನು ಕೇಳಿ ನಮ್ಮ ರಜತಪರದೆಯ ರಾಣಿಯು ತನಗುಂಟಾದ ಸಂತೋಷಾಧಿಕ್ಯದಿಂದಲೋ ಏನೋ, ಬಾಗಿಲಿನಿಂದ ಒಳಕ್ಕೆ ತಿರುಗಿ ತನ್ನ ಭವ್ಯಭವನದ ನಡುವೆ, ಟ್ಯೂಬ್‌ಲೈಟ್ ಕೆಳಗಿರುವ ಸುಪ್ಪತ್ತಿಗೆಯವರೆಗೆ (ಅವಳ ತಂದೆ ಮಿಲ್ ಕಾರ್ಮಿಕ, ಶ್ರಮಜೀವಿ) ನಡೆದುಕೊಂಡು ಹೋಗಿ ಅದರ ಮೇಲೆ ಬೀಳುತ್ತಾಳೆ. ಆಗ ಇದ್ದಕ್ಕಿದ್ದಂತೆ ಅತಳ, ವಿತಳ, ತಳಾತಳ, ಮಹಾಲೋಕ, ವೈಕುಂಠಗಳಲ್ಲಿರುವ ಎಲ್ಲಾ ಹಾರ್ಮೋನಿಯಂ, ಬಾಂಜೋ, ಸ್ಯಾಕ್ಸೋ ಫೋನುಗಳು ಒದರಲಾರಂಭಿಸುತ್ತವೆ. ಆ ಸಂಗೀತದ ಕಣಿ 'ಹೋ!' ಎಂದು ಒದರಲಾರಂಭಿಸುತ್ತಾಳೆ. ನಾವು ಮುಗ್ಧರಾಗಿ 'ವಹವಾ' ಎಂದು ಮೂರು ಕಾಸು ತೂರಿ ಸಿಳ್ಳೆ ಹಾಕುತ್ತೇವೆ. ಅವಳಿಗೆ ತಾಳ ಮರೆಯದಿರಲೆಂದು ನಾವೂ ತಾಳ ಹಾಕುತ್ತೇವೆ. ಅದೋ ಅಂತವಿಲ್ಲದನಂತ ಹಾಡು. ಅದು ಮುಗಿಯುವಷ್ಟರಲ್ಲಿ ಗಂಧರ್ವಲೋಕದ ರಾಗರಾಗಿಣಿಯರೆಲ್ಲರ ಕೈಕಾಲುಗಳೂ ನಡುಗುತ್ತಿರುತ್ತವೆ. 'ಶ್ರುತಗಾನಮಭಿರಾಮಮಾದೊಡಶುತ್ರ ಗಾನಮಭಿರಾಮತರಂ' ಎಂದು ಪ್ರಾಜ್ಞರ್ ಒರೆವರಲ್ತೆ. ಈ ಸಂಗೀತ ವಾಹಿನಿಗೆ ಸಿಕ್ಕು ನಾವು ಕತೆಯನ್ನೇ ಮರೆತಿರುತ್ತೇವೆ.

ಹೀರೋಗಳೇನು ಕಡಿಮೆಯಿಲ್ಲ. ನವ್ಯಕಾವ್ಯದ ಜಂಜಡ ಅವರಿಗೆಲ್ಲ. ಅವರು ಪದವಿಟ್ಟಳು ಪದ ಅಗ್ಗಳಿಕೆಯುಳ್ಳವರು.

'ಹುಳಕಡಿದ ಹಾರ್ಮೋನು ಮೇಣ್ ಅಮೀಬಾ' ಎಂದು ಹೇಳುವ ಕಷ್ಟ ಅವರಿಗಿಲ್ಲ. ಅವರು ಭಕ್ತರು ದಾರ್ಶನಿಕರು.

'ಜೀವನ್ ಅಪನಾ ವಾಪಸ್ ಲೇಲೇ

ಜೀವನ ದೇನೇ ವಾಲೇ

ಓ ದುನಿಯಾನೇ ರಖ್ ವಾಲೆ' ಎಂದು ಹಾಡುವರು. ಚೆನ್ನಾಗಿದೆ. ಉತ್ತಮ ಪ್ರಾಸ ಸಂಪತ್ತು.

ಬರೇ ಹೀರೋ ಹೀರೋಯಿನ್ನುಗಳೇ ಅಲ್ಲ ಭಾರತದ ಎಲ್ಲರೂ ಕವಿಗಳು, ಸಂಗೀತಜ್ಞರು, ಮುದುಕ-ತದುಕರು, ಚಿಳ್ಳೆ-ಪಿಳ್ಳೆಗಳು, ಭಿಕ್ಷುಕರು-ಶಿಕ್ಷೆಗಾರರು, ಲಾಯರುಗಳು-ಮೇಯರುಗಳು ಒಂದೇ ಮಾತಿನಲ್ಲಿ ಹೇಳುವುದಾದರೆ ಎಲ್ಲರೂ ಯಾವಾಗಲೂ ಎಲ್ಲೆಲ್ಲಿಯೂ ಹಾಡು ಕೇಳುತ್ತಾರೆ. ಕುರಿತೋದದೆಯುಂ ಗೊತ್ತಿದೆಯಲ್ಲಾ, ರೈಲ್ವೆಜಂಕ್ಷನ್ ಮಿಲಿಟರಿ ಲಾರಿ, ಪಾಸ್ ಮುಂಜಾನ್, ಕಾಮೆಟ್ ವಿಮಾನ, ಸೈಬೀರಿಯ ಎಲ್ಲಿದ್ದರೇನು, ಯಾರಾದರೇನು ಆಶು ಸಂಗೀತ, ಆಶು ಆರ್ಕೆಸ್ಟ್ರಾ.

3) ಇದು ಹೇಗಿದೆ? ವಸಂತಮಾಸ! ಕೋಗಿಲೆ ಕುಕಿಲುತ್ತಿದೆ! ರಾತ್ರಿ! ಬೆಳುದಿಂಗಳು! ಮಂದಮಾರುತ! ಹರಿವ ತೊರೆಯ ಮೇಲೆ ಹರಿಗೋಲು! ಅಲ್ಲಿದ್ದಾನೆ ನಮ್ಮ ಹೀರೋ! ತಲೆಗೂದಲು ಭಯಂಕರವಾಗಿ ಕೆದರಿವೆ!! ಪ್ಯಾಂಟಿನ ತುದಿ ನಾಲ್ಕಾರು ಬಾರಿ ಮಡಿಚಲ್ಪಟ್ಟಿದೆ. ಬುಷ್ಷೋ ಬರ್ಡ್ಸೋ, ಕೋಟೋ, ಷರ್ಟೋ, ಜಾಕೆಟೋ, ಅವನ ಎದೆಯ ಮೇಲೆ

ನೇತಾಡುತ್ತಿದೆ. ಅವನಿಗೆ ಮೀಸೆ ಬೇರೆ (ದಂಡ)!! ಅವನಿಗೆ ಕಾವ್ಯಜ್ವರ 'ಓ ಒ ಒ ಓ' ಎಂದು ಅರಚುತ್ತಾನೆ. ಅತ್ತ ತೀರಾಂತರ ಕುಂಜವನದಿಂದಲೂ ಅದೇ ಕೂಗು? ಬೆಳದಿಂಗಳ ರಾತ್ರಿಯಲ್ಲಿ ಹಾಗೆ ಕೂಗುವುದೇನಿದ್ದೀತು? ಗಾರ್ಧಬವೇ? ಘೋಸ್ಟೇ? ಅಲ್ಲ, ಬಂದಳು.... ಬಂದಳು! ಗಂಭೀರ ನಿಶೆಯಲ್ಲಿ; ನಮ್ಮ ಹೀರೋಯಿನ್ (ಕಾರ್ಮಿಕನ ಮಗಳು) ಜಾರ್ಜೆಟ್ ಸೀರೆಯುಟ್ಟು, ರೇಷ್ಮೆ ರವಕೆ ತೊಟ್ಟು, ಮಂದಹಾಸದಿಂದ ಹೆಬ್ಬಿಗುಬ್ಬಾಲೆ ಬೆಕ್ಕನ್ನು ತಿರಸ್ಕರಿಸುತ್ತಾ. ಅವಳ ಹಿಂದೆಯೇ ಹಾರ್ಮೋನಿಯಂ ಇತ್ಯಾದಿ. ಮೂರ್ಛೆ ಹೋಗುವುದೊಂದು ಬಾಕಿ.

4) ಇನ್ನೊಂದು ಮೊಖದ್ದಮೆಯನ್ನು ಪರಿಶೀಲಿಸಿರಿ. *(Consider this case)* ಖಳನಾಯಕನ ಪ್ರಭಾವದಿಂದ ನಾಯಕ ಪಾತಾಳವನ್ನು ಸೇರಿದ್ದಾನೆ. (ಅವನು ನಿಜವಾಗಿಯೂ ಕೆಲಸವಿಲ್ಲದ ಕಮ್ಯುನಿಸ್ಟ್ ಕವಿ) ಅವನ ತಾಯಿ ಹೋಟೆಲಿಗೆ ಸೇರಿ ಕೆಲಸ ಮಾಡುತ್ತಿದ್ದಾಳೆ. ನಾಯಕಿಯೋ ಮಗಳು *of idle rich man.* ಅವರೆಲ್ಲರೂ ದುಃಖಾತಿರೇಕದಿಂದ ಕಂಗೆಟ್ಟಿದ್ದಾರೆ.

ನಾಯಕಿಗೆ ಸ್ಫೂರ್ತಿ ಬಂದು ಹಾಡಲಾರಂಭಿಸುತ್ತಾಳೆ. ಆಗಿನ್ನೂ ಚೆನ್ನಾಗಿ ತಿಂದು ಬಂದಿದ್ದರೂ ಧ್ವನಿ ನಡುಗುತ್ತಿರುತ್ತದೆ. ಅವಳ ಪಲ್ಲವಿ ಮುಗಿದೊಡನೆ ನಾಯಕನ ಮಾತೆ ಸರ್ವಜ್ಞಳು, ಆ ಪಲ್ಲವಿಗೆ ತಕ್ಕ ಅನುಪಲ್ಲವಿಯನ್ನು ಕಟ್ಟಿ ದೋಸೆ ಹಿಟ್ಟು ರುಬ್ಬುವುದು ಬಿಟ್ಟು ಗಾಯನವಂ ಪಾಡುತ್ತಾಳೆ. ನೆನೆಸಿದವರ ಮನಸಿನೊಳಗಿರುವ ಆರ್ಕೆಸ್ಟ್ರಾ ಅಲ್ಲಿ ಹಾಜರ್. ಹೋಟೆಲು ಮಾಲೀಕ, ತ್ಯಾಗರಾಜಭಕ್ತ, ಆರ್ಕೆಸ್ಟ್ರಾದವರಿಗೆ ಮೆಚ್ಚಿ ಅವರ ಸಂಗೀತ ಕೇಳುತ್ತಾ ಮೈಮರೆತು ನಿಲ್ಲುತ್ತಾನೆ.

ಅವಳ ಅನುಪಲ್ಲವಿ ಕೊನೆಗೊಂಡೊಡನೆ ಕಾಲುಸೆಕೆಂಡಿನಲ್ಲಿ ಆರ್ಕೆಸ್ಟ್ರಾ, ಜೈಲಿಗೆ ಷಿಫ್ಟಾಗುತ್ತದೆ. ನಾಯಕ ಚರಣ ಕಟ್ಟಿ ಹಾಡುತ್ತಾನೆ. ವಿದ್ಯುತ್ತಿಗಿಂತ ಹೆಚ್ಚು ವೇಗದಿಂದ ಚಲಿಸುವ ಈ ಆರ್ಕೆಸ್ಟ್ರಿಗರು ಮನಸು ಮಾಡಿದರೆ ಮೂರು ದಿನದಲ್ಲೇ ಚಂದ್ರಲೋಕಕ್ಕೆ ಹಾರಿಹೋಗಬಹುದು. ಹಾಗಾಗುವುದು ಲೋಕಕ್ಕೆ ಕ್ಷೇಮ.

ಇದನ್ನೆಲ್ಲಾ ನೋಡಿದರೆ ಸುಖ, ದುಃಖ, ಭಯ, ದ್ವೇಷ, ಅನುತಾಪ ಅಲ್ಲದೆ ಉಳಿದ 287 ಸ್ಥಾಯೀ ಸಂಚಾರೀ ಭಾವಗಳಲ್ಲೂ ಮಾನವ, ಬಡಭಾರತೀಯ ಕಾವ್ಯ ಕಟ್ಟುವನೆಂಬುದು ಸ್ಪಷ್ಟವಾಗುತ್ತದೆ.

ಬೆಲೆಯಿಂದಕ್ಕುಮೆ ಕೃತಿ? ಇಲ್ಲ, ಗಾವಿಲಜನರ ಭಾಗ್ಯದಿಂದ ಮಕ್ಕು.

---

**ಅದು ಇದು**

**ಪಾಕಿಸ್ತಾನಿ ಟೀವಿ:** ನಮ್ಮ ದೇಶ ಹಾರಿಸಿದ ಉಪಗ್ರಹ ಮಂಗಳ ಗ್ರಹದಿಂದ ಅದ್ಭುತ ಚಿತ್ರಗಳನ್ನು ಕಳಿಸಿದೆ. ಗ್ರಹದಲ್ಲಿ ಅಪಾರ ಪ್ರಮಾಣದಲ್ಲಿ ನೀರಿರುವುದು ಗೊತ್ತಾಗಿದೆ.
**ಬಿಬಿಸಿ:** ಪಾಕಿಸ್ತಾನ ಹಾರಿಸಿದ್ದ ಉಪಗ್ರಹದ ಅವಶೇಷಗಳು ಪೆಸಿಫಿಕ್ ಸಾಗರದಲ್ಲಿ ಪತ್ತೆಯಾಗಿವೆ.

# ಅಪರಂಜಿ 32ರ ಹಬ್ಬ ಹೀಗೆ ನಡೀತು ನೋಡಿ

**ನಾ**ವೆಲ್ಲ ಅಂದ್ಕೊಂಡ ಹಾಗೆ

ಪ್ಲಾನ್ ಮಾಡಿಕೊಂಡ ಹಾಗೆ

ಅಪರಂಜಿ 32ರ ಹಬ್ಬ ಮೈಸೂರಿನಲ್ಲಿ ಅಬ್ಬಾ! ಅನ್ನುವ ಹಾಗೆ ನಡೀತು.

ಭಾರತೀಯ ವಿದ್ಯಾ ಭವನದ ಸಭಾಂಗಣ ಕಿಕ್ಕಿರಿದು ತುಂಬಿತ್ತು.



ಕಾರ್ಯಕ್ರಮ ಉದ್ಘಾಟಿಸಲೆಂದು ಪ್ರೀತಿಯಿಂದ ಬಂದಿದ್ದ ಕೆ.ಬಿ. ಗಣಪತಿ, ಅಧ್ಯಕ್ಷತೆ ವಹಿಸಿದ್ದ ಭಾರತೀಯ ವಿದ್ಯಾ ಭವನದ ಅಧ್ಯಕ್ಷ ಎನ್. ರಾಮಾನುಜ, ಅಪರಂಜಿಯ



ಸಂಪಾದಕರಾದ ಎಂ. ಶಿವಕುಮಾರ್, ಭಾರತೀಯ ವಿದ್ಯಾ ಭವನದ (ಮೈಸೂರು) ಖಚಾಂಚಿ ಎ.ಟಿ. ಭಾಷ್ಯಂ ಮತ್ತು ಉಪಸಂಪಾದಕ ಬೇಲೂರು ರಾಮಮೂರ್ತಿ ಅವರ ಸಮ್ಮುಖದಲ್ಲಿ ಅಪರಂಜಿ 32ರ ಹಬ್ಬ ಉದ್ಘಾಟನೆಯಾಗಿ ವಿಶೇಷಾಂಕವೂ ಬಿಡುಗಡೆಯಾಯಿತು.




ಗಣಪತಿಯವರು ತಮ್ಮ ಪತ್ರಿಕಾ ರಂಗದ ಅನುಭವಗಳನ್ನು ವ್ಯಕ್ತಪಡಿಸುವುದರ ಜೊತೆಗೆ ಅಪರಂಜಿಯಂಥ ಪತ್ರಿಕೆಗಳು ಹೆಚ್ಚು ಕಾಲ ಉಳಿಯಬೇಕೆಂದು ಅಭಿಪ್ರಾಯಪಟ್ಟರು.



ಕೊರವಂಜಿಯಲ್ಲಿ ಪ್ರಕಟವಾಗಿದ್ದ ಆರ್.ಕೆ. ಲಕ್ಷ್ಮಣ್ ಮತ್ತು ಇತರ ಕೆಲವರ ಅಪರೂಪ ವ್ಯಂಗ್ಯಚಿತ್ರಗಳನ್ನು ಶಿವಕುಮಾರರು ಪ್ರದರ್ಶನ ಮಾಡಿ ವಿವರಣೆ ಕೊಟ್ಟಿದ್ದು ಸಭಿಕರಲ್ಲಿ ಅತ್ಯಂತ ಸಂತೋಷ ತಂದಿತು. ಪ್ರೊ. ಎಂ. ಕೃಷ್ಣೇಗೌಡ ಮತ್ತು ವೈ.ವಿ. ಗುಂಡೂರಾವ್ ಅವರ ಹಾಸ್ಯ ಪೂರಿತ ಮಾತುಗಳ ಜೊತೆಗೆ ಬೇಲೂರರು ನಾ. ಕಸ್ತೂರಿ ಅವರನ್ನು ನೆನಪಿಸಿ ಕೆಲವು ರಸಮಯ ಪ್ರಸಂಗಗಳನ್ನು ಹೇಳಿದರು.

ಅಪರಂಜಿಯ ಅಭಿಮಾನಿಗಳಾಗಿ ಕೆ.ಬಿ. ಪ್ರಭುಪ್ರಸಾದ್, ಇ.ಆರ್. ರಾಮಚಂದ್ರನ್, ನ. ರತ್ನ, ಸಿ.ಆರ್. ಸತ್ಯ ಮತ್ತು ಎಚ್.ಎಸ್. ಬಾಬು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಮೈಸೂರಿನ ಜನತೆ ಇಂಥದ್ದೊಂದು ಕಾರ್ಯಕ್ರಮಕ್ಕೆ ಅಭೂತಪೂರ್ವ ಬೆಂಬಲ ಕೊಟ್ಟಿದ್ದು ವಿಶೇಷವಾಗಿತ್ತು. ಭಾರತೀಯ ವಿದ್ಯಾಭವನ ಮೈಸೂರು ಕೇಂದ್ರದ ಸಿಬ್ಬಂದಿ ವರ್ಗ ನಮ್ಮೊಡನೆ ಸಹಕರಿಸಿ ಕಾರ್ಯಕ್ರಮ ಯಶಸ್ವಿಯಾಗಲು ನೆರವಾದರು. ಅವರೆಲ್ಲರ ಸಹಕಾರವನ್ನು ಅಪರಂಜಿ ತುಂಬು ಹೃದಯದಿಂದ ನೆನೆಯುತ್ತಾಳೆ. ಇದೇ ಸಂದರ್ಭದಲ್ಲಿ ಅನೇಕ ಅಭಿಮಾನಿಗಳು ಅಪರಂಜಿಯ ಓದುಗ ವಲಯಕ್ಕೆ ಬಂದರು. ಮುಂದೆಯೂ ಇಂಥಾ ಕಾರ್ಯಕ್ರಮಕ್ಕೆ ನಮ್ಮ ಬೆಂಬಲ ಇದೆ ಎಂದು ಹರ್ಷ ವ್ಯಕ್ತಪಡಿಸಿದರು.

ಭೋಜನ ಕೂಟದೊಂದಿಗೆ ಅಪರಂಜಿಯ 32ರ ಹಬ್ಬ ಮುಕ್ತಾಯವಾಯಿತು.

---

## ಕಿವಿಯೋಪಾಖ್ಯಾನ

ಚಿಕ್ಕವರಿದ್ದಾಗ ಮಕ್ಕಳಿಗೆ ಚುಚ್ಚುತ್ತಾರೆ ಕಿವಿ
ಶಾಲೆಗೆ ಹೋದಾಗ ಮೇಷ್ಟ್ರು ಹಿಂಡುತ್ತಾರೆ ಕಿವಿ
ದೊಡ್ಡ ಶಾಲೆಗೆ ಹೋದಾಗ ಎದ್ದು ಕೂತು
ಮಾಡಿಸುತ್ತಾರೆ ಹಿಡಿದು ನಮ್ಮ ಕಿವಿ
ಕೆಲಸಕ್ಕೆ ಸೇರಿದ ಮೇಲೆ ಬಾಸ್ ಆಡುವ
ಮಾತನ್ನು ಕೇಳುತ್ತಾರೆ ಕೊಟ್ಟು ಬಾಗಿಲಿಗೆ ಕಿವಿ
ಮದುವೆಯಾದ ಮೇಲೆ ಹೆಂಡತಿಯ
ಎಲ್ಲಾ ಮಾತಿಗೂ ಕೊಡುತ್ತಾರೆ ಕಿವಿ
ವಯಸ್ಸಾದ ಅಮ್ಮನ ಮಾತನ್ನು ಕೇಳದೇ
ಮುಚ್ಚಿಕೊಳ್ಳುತ್ತಾರೆ ಕಿವಿ
ಎದುರಿಗಿರುವುದು ಕಾಣದಾದಾಗ ಕೊಡುತ್ತಾರೆ
ಕನ್ನಡಕದ ಫ್ರೇಮಿಗೆ ಕಿವಿ
ಸಾಲ ವಾಪಸ್ ಕೇಳಲು ಬಂದಾಗ ಇಲ್ಲದಂತೆ
ನಟಿಸುತ್ತಾರೆ ಕಿವಿ
ಇನ್ನೂ ಬೇಕಾದಷ್ಟಿದೆ ಕೇಳಲು ಸಿದ್ಧವಾಗಿದ್ರೆ
ನಿಮ್ಮ ಕಿವಿ

*–ಸುಕೇಶವ*

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಳ**

- ಸ್ವಚ್ಛ ಭಾರತ ಸರಿ, ಸ್ವಸ್ಥ ಭಾರತ ಬೇಡವೆ?
- ಉಪನ್ಯಾಸಕ? ವಾಟ್ ಎ ನೋಬಲ್ ಜಾಬ್! ಆದರೆ ಅದು ನೊಬೆಲ್ ಜಾಬ್ ಅಲ್ಲ, ಜಾಬ್ ವಿತ್ ಬೆಲ್.
- ಎಚ್ಚರವಿರುವಾಗಲೇ ಹೆಚ್ಚು ಕನಸು ಕಾಣಬೇಕು.
- ನಾನು ಇಲ್ಲದಿರುವಾಗ ನನ್ನನ್ನು ಗೌರವಿಸುವ ವ್ಯಕ್ತಿಯನ್ನು ನಾನು ಗೌರವಿಸುತ್ತೇನೆ.
- ಬೆವರಿಲ್ಲ = ಅಜ್ಞಾನ
- ಕ್ರಿಕೆಟಿಗ ಸುರೇಶ್ ರೈನಾ ಅವರ ಮದುವೆ ಫಿಕ್ಸ್‌ಡ್ ಅಂತೆ. ಛೆ! ಅವರ ತಾಯೀನೆ ಫಿಕ್ಸ್ ಮಾಡಿದ್ದು, ಅಪಾರ್ಥ ಬೇಡ.
- ವಾಸ್ತು ಇರುವುದು ಕಟ್ಟಡದಲ್ಲೋ ಮನಸ್ಸಿನಲ್ಲೋ...?

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ನಿಮಗೆ ಕೋಪ ಏಕೆ ಬರುತ್ತದೆ? ಎಂಬ ಪ್ರಶ್ನೆಯೇ ಅನೇಕರಿಗೆ ಕೋಪ ಬರಿಸುತ್ತದೆ.
- ಮಾತೇ ಅರ್ಥವಾಗದವನಿಗೆ ಮೌನ ಅರ್ಥವಾದೀತೆ?
- ನಿಮ್ಮೊಳಗಿನ ವಿಮರ್ಶಕ ಬೆಳೆದರೆ
  ನೀವು ಅಪ್ಪಟ ಕವಿಯಾಗುವಿರಿ ಖರೆ.
- ಇಫ್ ಯು ಓನ್ಲಿ ಪ್ರೆ ವೆನ್ ಯು ಆರ್ ಇನ್ ಟ್ರಬಲ್ ಯು ಆರ್ ಇನ್ ಟ್ರಬಲ್.
- ಚರ್ಮದಿಂದ ಹಿಡಿದು ಸಕ್ಕರೆಯವರೆಗೆ ನಮಗೆ ಎಲ್ಲವೂ ಬಿಳಿಯದೇ ಇರಬೇಕು, ಹಣವೊಂದನ್ನು ಬಿಟ್ಟು.
- ಸ್ವರ್ಗದಲ್ಲಿ ಜಾಗ ಸಿಗಬೇಕಾದಲ್ಲಿ ಮೆರಿಟ್ ಒಂದೇ ಆಧಾರವಾದರೆ ಅನೇಕರಿಗೆ ಸಿಗದು; ಆದರೆ ಅವರ ನಾಯಿಗೆ ಸಿಗುತ್ತದೆ.
- ನಿದ್ದೆ ಮತ್ತು ದುಡಿಮೆ ನಡುವೆ ಸಂಘರ್ಷವಾದರೆ ಗೆಲ್ಲುವುದು ದುಡಿಮೆಯೇ.
- ನೀನು ಬೇಕಿದ್ದರೆ ಬೀದಿ ಬದಿಯ ಮೋಚಿ ಆಗು ಆದರೆ ಅತ್ಯುತ್ತಮ ಮೋಚಿ ಆಗು.
- ಗಾಡ್ ಈಸ್ ಪ್ರೆಸೆನ್ಸ್ ಆಫ್ ಎನರ್ಜಿ; ಫೈಥ್ ಈಸ್ ಆಬ್ಸೆನ್ಸ್ ಆಫ್ ಡೌಟ್.
- ದುಡಿದು ಹಣ ಗಳಿಸಿ ಅಪಾರ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯ ನಿಜ. ಆದರೆ ನಿದ್ದೆ ಆ ಸೌಲಭ್ಯಗಳಲ್ಲಿ ಒಂದಾಗದಿರಬಹುದು.

# ಮಂಗಳ - ಅಮಂಗಳ

**- ವೈ.ವಿ. ಗುಂಡೂರಾವ್**

ಇಸ್ರೋದ ವಿಜ್ಞಾನಿಗಳು ರಾಕೆಟ್ಟನ್ನು ಮಂಗಳ ಗ್ರಹಕ್ಕೆ ಉಡಾಯಿಸಿದ ವಿಷಯ ಕೇಳಿದ್ದೆ. ದೂರದರ್ಶನದಲ್ಲಿ ನೋಡಿದ್ದೆ. ವೃತ್ತಪತ್ರಿಕೆಗಳಲ್ಲಿ ಓದಿದ್ದೆ. ಈ ವಿಷಯ ನನ್ನ ಮನಸ್ಸನ್ನು ಹೊಕ್ಕಿತ್ತು. ನಂತರ ಡಾ|| ಎಸ್.ಎಲ್. ಭೈರಪ್ಪ ನವರ ''ಯಾನ'' ಕಾದಂಬರಿ ಓದಿದೆ. ವಿಷಯ ಮನಸ್ಸಿನ ಆಳಕ್ಕೆ ಇಳಿಯಿತು...

ಕೆಲವು ದಿನಗಳು ಉರುಳಿದವು. ನಂತರ ಇಸ್ರೋದವರು ತಮ್ಮ ಮುಂದಿನ ಸಾಹಸಕ್ಕಾಗಿ ಮಂಗಳ ಗ್ರಹಕ್ಕೆ ಮಾನವನನ್ನು ಕಳುಹಿಸುವ ಯೋಜನೆ, ಯೋಚನೆ ವ್ಯಕ್ತಪಡಿಸಿದರು. ಇದು ನನ್ನಿಂದ ತಡೆದುಕೊಳ್ಳುವುದಾಗಲಿಲ್ಲ. ಹಲವಾರು ದಿನಗಳು ತಲೆ ಎಲ್ಲಾ ಕೊರೆದು ಮನಸ್ಸನ್ನೆಲ್ಲಾ ಆವರಿಸಿ, ನರನಾಡಿಗಳಲ್ಲೂ ಹರಿಯತೊಡಗಿತು... ಆ ಮಾನವ ನಾನೇ ಏಕೆ ಆಗಬಾರದು ಎನ್ನಿಸಿತು. ಇನ್ನು ಸುಮ್ಮನಿರಬಾರದು, ಕಾರ್ಯೋನ್ಮುಖನಾಗಬೇಕು ಎಂದು ನಿರ್ಧಾರ ತೆಗೆದುಕೊಳ್ಳುವ ಹಾಗೆ ಮಾಡಿತು. ಇಸ್ರೋಗೆ ಹೋದೆ. ಇದ್ದ ಬದ್ದವರನ್ನೆಲ್ಲಾ ಭೇಟಿಯಾದೆ. ಸಂಬಂಧಪಟ್ಟವರೊಡನೆ ಚರ್ಚಿಸಿದೆ. ನನ್ನ ಮನೋ ಇಂಗಿತವನ್ನು ಅರುಹಿದೆ. ಆ ಮಾನವ ನಾನೇ ಆಗ್ತೀನಿ, ನನ್ನನ್ನೇ ಆಯ್ಕೆ ಮಾಡಿ ಎಂದು ವಿನಂತಿಸಿಕೊಂಡೆ.... ಅದೃಷ್ಟ ನೋಡಿ, ಹೇಗೆ ಬರುತ್ತೆ ಅನ್ನೋದಕ್ಕೆ ಹೇಳ್ತೀನಿ. ನನ್ನ ಪ್ರಯತ್ನಗಳೆಲ್ಲಾ ಸಫಲವಾದವು. ಮಂಗಳ ಗ್ರಹಕ್ಕೆ ಹೋಗುವ ಪ್ರಥಮ ಮಾನವನಾಗಿ ಆಯ್ಕೆಯಾದೆ....

**ಮೊದಲ ಮಾನವನ ಜತೆ ಆಡಿಯೋ, ನೋಡಿಯೋ ಮತ್ತು ರೇಡಿಯೋ ಸಂದರ್ಶನ.**

ಸರಿ. ಎಲ್ಲಾ ರೀತಿ ಪರೀಕ್ಷೆಗಳು – ದೈಹಿಕ, ಮಾನಸಿಕ, ಬೌದ್ಧಿಕ, ಮುಂತಾದವು ಮುಗಿದು, ಎಲ್ಲ ಪರೀಕ್ಷೆಗಳಲ್ಲೂ ತೇರ್ಗಡೆಯಾದೆ. ಫಾರ್ಮಾಲಿಟೀಸ್ ಎಲ್ಲಾ ಕಂಪ್ಲೀಟಾದವು.... ನಿಗದಿತ ದಿನ, ನಿಗದಿತ ಸ್ಥಳ, ಯಾವುದು ಹೇಳಿ?? ಓ, ನಿಮಗೆ ಗೊತ್ತಿಲ್ಲದೇ ಇರತ್ತಾ?... ಸರಿಯಾಗಿ ಹೇಳಿದಿರಿ. ಶ್ರೀಹರಿಕೋಟ. ಅಲ್ಲಿಂದ ಹೊರಡೋದು ಅಂತಾಯಿತು. ಹೊರಡೋದೇನು! ಹಾರೋದು ಅಥವಾ ಏರೋದು ಅನ್ನಬಹುದು.... ಕುಟುಂಬದವರು, ಗೆಳೆಯ–ಗೆಳತಿಯರು, ಬಂಧು–ಬಳಗದವರು, ಹಿತೈಷಿಗಳು, ಎಲ್ಲರೂ ಜಮಾಯಿಸಿದ್ದರು ಶ್ರೀಹರಿಕೋಟದಲ್ಲಿ, ಆ ದಿನ, ಆ ಕ್ಷಣ, ಬಂದೇ ಬಿಟ್ಟಿತು.....

9...8...7...6...5...4...3...2...1...0... ವಯ್‌ಇಂಂಂಂ....

ರಾಕೆಟ್ ಬೆಂಕಿ ಹತ್ತಿಕೊಂಡು, ನನ್ನನ್ನು ಹೊತ್ತುಕೊಂಡು ನಭೋಮಂಡಲಕ್ಕೆ ಹಾರಿತು... ''ಏರಿತು... ಹಾರಿತು... ಕನ್ನಡದ ಹಕ್ಕಿಯು...''

....ತಿಂಗಳುಗಳುರುಳಿದವು. ನಿರಂತರವಾಗಿ ನಾನು ಭೂಲೋಕದ ಕೇಂದ್ರದ ಸಂಪರ್ಕದಲ್ಲಿದ್ದೆ. ಸಂವಹನ ನಡೆದೇ ಇತ್ತು, ಮೆಗಾ ಕಂಪ್ಯೂಟರ್ ಮೂಲಕ.

.....ಹೀಗಿರಲಾಗಿ, ಒಂದು ದಿನ ಏನಾಯಿತು? ನಮ್ಮ ಭೂಕೇಂದ್ರದಿಂದ ಒಂದು ಸಂದೇಶ ಬಂತು. ಬೆಂಗಳೂರಿನ ಒಂದು ಕನ್ನಡ ಪತ್ರಿಕೆ ನನ್ನ ಸಂದರ್ಶನ ಮಾಡಬೇಕಂತೆ. ವಿಶೇಷ ಸಂದರ್ಶನ. ಸಂದರ್ಶಕರ ಧ್ವನಿ ನನಗೆ ಕೇಳುತ್ತಾ ಇರುತ್ತೆ – ಇಯರ್ ಫೋನ್ ಮೂಲಕ. ಅವರ ಮುಖ ಕಾಣುತಾ ಇರುತ್ತೆ – ಕಂಪ್ಯೂಟರ್ ಸ್ಕ್ರೀನ್ ಮೂಲಕ. ಓದಲು ಅನುಕೂಲವಾಗಲು ಸ್ಕ್ರೀನ್ ಕೆಳಗೆ ಪ್ರಶ್ನೆಗಳು ಸ್ಕ್ರೋಲ್ ಆಗ್ತಾ ಇರುತ್ತವೆ... ಅಂದರೆ ಇದು ಒಂದು ರೀತಿಯ ಆಡಿಯೋ, ನೋಡಿಯೋ ಮತ್ತು ರೇಡಿಯೋ ಸಂದರ್ಶನ.

ಸರಿ. ಸಿದ್ಧನಾದೆ ದರ್ಶನಕ್ಕೆ, ಸಂದರ್ಶನಕ್ಕೆ, ಪ್ರಶ್ನೋತ್ತರಕ್ಕೆ.

ಸಂದರ್ಶಕ : ಸಾರ್! ನಮಸ್ಕಾರ. ಅಭಿನಂದನೆಗಳು... ಏನನ್ನಿಸ್ತಾ ಇದೆ, ಸಾರ್?! ಹೇಗಿದೆ ಹೊಸ ಅನುಭವ? ನಿಮ್ಮ ಮನದ ಭಾವ ಹಂಚಿಕೊಳ್ತೀರಾ, ಭೂಮಿ ಮೇಲಿರೋರ ಜೊತೆ?

ನಾನು : ಖಂಡಿತ... ರೋಮಾಂಚನವಾಗ್ತಾ ಇದೆ... ಒಬ್ಬ ಕವಿಯ ಕವನ ನೆನಪಾಗುತ್ತಾ ಇದೆ. ''ಏನಾದರೂ ಆಗು ಮೊದಲು ಮಾನವನಾಗು'' ಅಂದಿದ್ದ ಆ ಕವಿ. ಆದರೆ ನನಗೆ ''ಏನಾದರೂ ಆಗು ಮೊದಲ ಮಾನವನಾಗು'' ಅಂದ ಹಾಗೆ ಆಗ್ತಿದೆ.

ಸಂದರ್ಶಕ : ನೀವು ಮಂಗಳ ಗ್ರಹದಲ್ಲಿ ಮೊದಲು, ಮೊದಲ ಕಾಲಿಟ್ಟಾಗ ಏನನ್ನಿಸಿತು?

ನಾನು : ಎರಡನೇ ಕಾಲೂ ಇಡಬೇಕು ಅನ್ನಿಸಿತು. ಯಾಕೆಂದರೆ, ಬ್ಯಾಲೆನ್ಸ್ ಇರಲಿಲ್ಲ, ಭೂಲೋಕದಲ್ಲೂ ಕೆಲವರಿಗೆ, ಕೆಲ ಸಮಯದಲ್ಲಿ ಬ್ಯಾಲೆನ್ಸ್ ಇರೋದಿಲ್ಲವಲ್ಲ, ಹಾಗಾಯಿತು.

ಸಂದರ್ಶಕ : ಮೊದಲು ಬಲಗಾಲು ಇಟ್ಟರೋ, ಅಥವಾ ಎಡಗಾಲೋ?

ನಾನು : ನೋಡಿ! ಆಕಾಶದಲ್ಲಿ ಮೂಢನಂಬಿಕೆ ಇರೋದಿಲ್ಲ. ಅಲ್ಲಿರೋದು ಮೋಡನಂಬಿಕೆ ಅಷ್ಟೆ. ಅದೂ ಅಲ್ಲದೆ ಎಡ, ಬಲ ಅನ್ನುವ ಎಬಡ ನಾನಲ್ಲ. ಮನುಷ್ಯ ಉನ್ನತ ಸ್ಥಳದಲ್ಲಿದ್ದಾಗ ಎಡ, ಬಲ ಅನ್ನುವ ಭೇದ ಇರೋದಿಲ್ಲ, ಅಲ್ಲವೇ? ಒಟ್ಟಿನಲ್ಲಿ ಕಾಲಿಡೋದು ಮುಖ್ಯ. ಗ್ರಹದ ಮೇಲೆ ಕಾಲಿಡುವಾಗ ಗ್ರಹಚಾರಗಳನ್ನು ನಂಬಬಾರದು.

ಸಂದರ್ಶಕ : ಬಹಳ ಅರ್ಥಪೂರ್ಣ ಸಾರ್, ನಿಮ್ಮ ಮಾತು... ಸಾರ್! ಕೆಲವರಿಗೆ ಈ ಬಸ್ಸು, ಟ್ರೇನ್‌ಗಳಲ್ಲಿ ಪ್ರಯಾಣ ಮಾಡುವಾಗ ಹೊಟ್ಟೆ ತೊಳೆಸಿ ವಾಂತಿ ಆಗುತ್ತೆ. ನಿಮಗೆ ಹಾಗೇನಾದರೂ ಆಯಿತಾ? ಮೊದಲನೇ ಸಾರಿ ರಾಕೆಟ್‌ನಲ್ಲಿ ಪ್ರಯಾಣಿಸುವಾಗ ವಾಮಿಟ್?



ನಾನು : ವಾಮಿಟ್ಟಾ? ಡ್ಯಾಮಿಟ್! ಇಲ್ಲೇನು ವಾಮಿಟ್ ಆಗೋದಕ್ಕೆ ಘಾಟ್ ಸೆಕ್ಷನ್ ಇದೆಯೇನ್ರೀ?

ಸಂದರ್ಶಕ : ಸಾರ್! ಪ್ಲೇನ್‌ನಲ್ಲಿ ಹೋಗೋದಕ್ಕೂ ರಾಕೆಟ್‌ನಲ್ಲಿ ಹೋಗೋದಕ್ಕೂ ಏನು ವ್ಯತ್ಯಾಸ?

ನಾನು : ಪ್ಲೇನ್‌ನಲ್ಲಿ, ಮೇಲೆ ಹೋದಮೇಲೆ ಕೆಲವು ಸಾರಿ ಬೆಂಕಿ ಹತ್ತಿಕೊಳ್ಳೋ ಅಪಾಯ ಇರತ್ತೆ. ಆದರೆ ರಾಕೆಟ್‌ನಲ್ಲಿ ಬೆಂಕಿ ಹತ್ತಿಕೊಂಡ ನಂತರಾನೇ ಮೇಲೆ ಹೋಗೋದು.

ಸಂದರ್ಶಕ : ನೀವು ಮೇಲೆ ಹೋದಾಗ ನಿಮ್ಮ ಪತ್ನಿಯವರನ್ನೂ ಕರಕೊಂಡು ಹೋಗಬೇಕಾಗಿತ್ತು ಅನ್ನಿಸಲಿಲ್ಲವಾ?

ನಾನು : ಖಂಡಿತ ಇಲ್ಲ, ಅದಕ್ಕೆ ಮೂರು ಕಾರಣಗಳು. ಮೊದಲನೆಯದು, ಮಂಗಳಕ್ಕೆ ಹೋದರೂ ಕಂಗಳ ಎದುರಿಗೇನಾ ಅಂದ ಹಾಗೆ ಆಗಬಾರದು ಅಂತ. ಎರಡನೆಯ ಕಾರಣ, ಇದು ಪ್ರಯೋಗಾತ್ಮಕ ಪ್ರಯಾಣ. ರಿಸ್ಕ್ ಜಾಸ್ತಿ, ಅಪಾಯ ಹೆಚ್ಚು. ಇನ್ನು ಮೂರನೆಯ ಕಾರಣ, ಗೃಹಿಣಿ ಗೃಹಮುಚ್ಯತೇ ಅಂತಾರೆಯೇ ಹೊರತು, ಗೃಹಿಣಿ ಗ್ರಹಮುಚ್ಯತೇ ಅನ್ನೋದಿಲ್ಲವಲ್ಲ!

ಸಂದರ್ಶಕ : ಬೇರೆ ಯಾರಾದರೂ ನಿಮಗೆ ನೆನಪಾಗ್ತಾ ಇದ್ದಾರಾ, ಸಾರ್! ಉದಾಹರಣೆಗೆ ಗೆಳೆಯ, ಗೆಳತಿಯರು?

ನಾನು : ಗೆಳೆಯರು ಆಗಲ್ಲ, ಗೆಳತಿಯರು ನೆನಪಾಗ್ತಾರೆ. ಆಗ ಕೆಲವು ಹಾಡುಗಳನ್ನ ಮಾರ್ಪಾಡು ಮಾಡಿಕೊಂಡು ಹಾಡಿಕೊಳ್ತೇನೆ.... ''ಆಕಾಶವೆ ಬೀಳಲಿ ಕೆಳಗೇ... ನಾನೆಂದು ನಿನ್ನವನು... ಭೂಮಿಯೆ ಮೇಲೇರುತ ಬರಲಿ... ನಾ ನಿನ್ನ ಕೈ ಬಿಡೆನು....'' ''ಆಕಾಶದಿಂದ ಧರೆಗಿಳಿದ ರಂಭೆ, ಕೂಡಲೇ, ಕೂಡಲೇ, ಮೇಲೇರು ಎಂಬೆ...'' ಆದರೆ ಇಲ್ಲೀಗ ರಂಭೆ ಇರಲಿ, ರೆಂಬೆ, ಕೊಂಬೇನೂ ಇಲ್ಲ.

ಸಂದರ್ಶಕ : ಸಾರ್! ಅಲ್ಲಿ, ಹೇಗೆ ಟೈಂ ಪಾಸ್ ಮಾಡ್ತೀರಾ?

ನಾನು : ಧ್ಯಾನ ಮಾಡ್ತಾ ಕಾಲ ಕಳೀತೀನಿ. ಭೂಮಿ ಮೇಲಿದ್ದಾಗಲೂ ಮಾಡ್ತಿದ್ದೆ. ಅಲ್ಲಿ ಮಾಡ್ತಿದ್ದಾಗ, ಮೇಲೆ.... ಮೇಲೆ... ಹೋದ ಹಾಗೆ ಅನುಭವ ಆಗುತಾ ಇತ್ತು. ಆದರೆ, ಇಲ್ಲಿ ಕೆಳಗೆ... ಕೆಳಗೆ... ಇಳಿದ ಹಾಗೆ ಅನುಭವ ಆಗುತ್ತೆ. ಕೆಲವು ಸಾರಿ ತಪೋಭಂಗನೂ ಆಗುತ್ತೆ... ಹೆಂಡತಿ, ಸಾಲಗಾರರು, ಬಾಸು, ಇವರೆಲ್ಲಾ ಕಾಣಿಸಿಕೊಂಡಾಗ.

ಸಂದರ್ಶಕ : ಊಟಕ್ಕೆ ಅಲ್ಲಿ ಏನು ಏರ್ಪಾಡಿದೆ?

ನಾನು : ಪಾರ್ಸೆಲ್ ಇದೆಯಲ್ಲಾ! ಅನೇಕ ತಿಂಗಳುಗಳಿಗಾಗುವಷ್ಟು

ಸಂದರ್ಶಕ : ಆದರೆ, ಆಹಾರ ಫ್ರೆಷ್ ಆಗಿರೋದಿಲ್ಲವಲ್ಲಾ? ಬಿಸಿ ಇರೋದಿಲ್ಲವಲ್ಲಾ?

ನಾನು : ಭೂಮಿ ಮೇಲೆ ಕೂಡ ಎಲ್ಲಿ ಫ್ರೆಷ್ ಆಹಾರ ಸಿಗ್ತಾ ಇತ್ತು!? ತಂಗಳು ತಿನ್ನೋದು ಭೂಮಿಯಿಂದಾನೇ ಅಭ್ಯಾಸ ಆಗಿದೆ. ಫ್ರಿಜ್ ಅನ್ನೋದಕ್ಕೆ ತಂಗಳು ಪೆಟ್ಟಿಗೆ ಅಂತ ತಾನೆ, ಹೆಸರು?

ಸಂದರ್ಶಕ : ಸರಿ ಸಾರ್! ಕೊನೇ ಪ್ರಶ್ನೆ. ಕೇಳಬೇಕೋ, ಕೇಳಬಾರದೋ ಗೊತ್ತಾಗ್ತಾ ಇಲ್ಲ...

ನಾನು : ಕೇಳಿ ಪರವಾಗಿಲ್ಲ, ಹೇಗೂ ಕೊನೇ ಪ್ರಶ್ನೆ ಅಂದರಲ್ಲಾ?

ಸಂದರ್ಶಕ : ನಿಮಗೆ, ಜೀವಂತವಾಗಿ ಕೆಳಗೆ ಇಳೀಬಹುದು ಅನ್ನಿಸತ್ತಾ ಅಥವಾ ಏನಾದರೂ ಹೆಚ್ಚು ಕಮ್ಮಿ ಆದರೆ, ಅದಕ್ಕೂ ಸಿದ್ಧವಾಗಿದ್ದೀರಾ?

ನಾನು : ಮೊದಲನೆಯದಾಗಿ, ನನಗೆ ಖಂಡಿತ ಕೆಳಗೆ ಬರುತ್ತೀನಿ ಅನ್ನುವ ನಂಬಿಕೆ ಇದೆ. ಯಾಕೆಂದರೆ ನನಗೆ ಅವತಾರದಲ್ಲಿ ನಂಬಿಕೆ ಇದೆ. ಇನ್ನು, ಅಕಸ್ಮಾತ್ ಏನಾದರೂ ಆದರೂ ಪರವಾಗಿಲ್ಲ, ಸತ್ತು, ಮೇಲೆ ಹೋಗುವ ಬದಲು, ಮೇಲೆ ಹೋಗಿ, ಸತ್ತೆ ಅಂದುಕೊಳ್ತೀನಿ.....

......ಇದ್ದಕ್ಕಿದ್ದಂತೆ ''ಧಡ್'' ಅಂತ ಭಾ...ರಿ... ಶಬ್ದ.... ರಾಕೆಟ್... ಕೆಟ್ಟು.. ಬ್ಲಾಸ್ಟ್ ಆಯಿತು.... ರಾಕೆಟ್ ಪೂರ್ತಿ ಬೆಂಕಿ.... ನಾನು... ಪ್ರಾಣ ಉಳಿಸಿಕೊಳ್ಳೋದಕ್ಕೆ ''ರೊಯ್...'' ಅಂತ ರಾಕೆಟ್ಟಿನಿಂದ ಭೂಮಿಗೆ ಜಂಪ್ ಮಾಡಿದೆ..... ಅಷ್ಟೆ.... ಆಮೇಲೆ ನೋಡಿದರೆ, ಮಂಚದಿಂದ ಕೆಳಗೆ ಬಿದ್ದಿದ್ದೆ... ಮನೆ ಗಡಿಯಾರ... 6.30 ತೋರಿಸ್ತಾ ಇತ್ತು. ಮಾರ್ಸ್ ಪ್ರಯಾಣ ಹೋಗಿ, ಯಾಮಾರ್ಸ್ (ಯಾಮಾರಿಸೋ) ಪ್ರಯಾಣ ಆಗಿತ್ತು.

# ಅಪರಂಜಿಗೆ ಹಾರ್ದಿಕ ಶುಭಾಷಯಗಳು

## ಡಾ. ಎಚ್.ಎಸ್. ಮುರಳಿ

ನೇತ್ರ ವೈದ್ಯರು

**ದಿ ಐ ಕ್ಲಿನಿಕ್**

ಅಣ್ಣಯ್ಯ ಕಾಂಪ್ಲೆಕ್ಸ್

ಹೊಸಳ್ಳಿ ರಸ್ತೆ, ಮಂಡ್ಯ

ಫೋನ್: 224834

ಸಮಯ: ಬೆಳಗ್ಗೆ 9 ರಿಂದ 1 ಗಂಟೆ

**ಮಾನಸ ಐ ಕ್ಲಿನಿಕ್**

ಬಸ್ ಸ್ಟಾಂಡ್ ಸರ್ಕಲ್

ಚಾಮುಂಡೀಪುರಂ

ಮೈಸೂರು 570 004

ಫೋನ್: 2332225

ಸಮಯ: ಸಂಜೆ 5 ರಿಂದ 8 ಗಂಟೆ

ಮೊಬೈಲ್: 94487 40093

# ಐಪೀಎಲ್ ವೀರರುಗಳಿವರೋ
# ವರ್ಲ್ಡ್ ಕಪ್ಪಿನಲಿ ನಸುನಾಚಿ ನೀರಾದರೋ

**- ಎಚ್.ಆರ್. ಹನುಮಂತ ರಾವ್**

**ಓ**ದುಗರಲ್ಲಿ ಬಿನ್ನಹ: ''ಕೊರವಂಜಿ''ಯ ಅತ್ಯಂತ ಹಳೆಯ ಪೀಳಿಗೆಯ ಬರಹಗಾರರಾಗಿ, ತಮ್ಮ ಹಾಸ್ಯ ಲೇಖನಗಳಿಂದ ಅಂದಿನ ದಶಕಗಳ ಓದುಗರನ್ನು ಮನರಂಜಿಸಿದ್ದ, ನಂತರದ ದಿನಗಳಲ್ಲಿಯೂ ಸುಧಾ, ಪ್ರಜಾವಾಣಿ, ಮಯೂರ, ಪ್ರಜಾಮತ, ಮತ್ತಿತರ ಪತ್ರಿಕೆಗಳ ಓದುಗರನ್ನು ಆಕರ್ಷಿಸಿದ್ದ ಇಂದಿನ ವೈಭವದ ''ಅಪರಂಜಿ''ಯ ಹುಟ್ಟಿಗೂ ಭಾಗಶಃ ಕಾರಣರಾಗಿದ್ದ ಶ್ರೀ ಅ.ರಾ. ಸೇತೂರಾಮರಾವ್ ''ಅ.ರಾ.ಸೇ.'' ಅತ್ಯಂತ ಹಿರಿಯರಾಗಿ, ನಮ್ಮ ಮಧ್ಯದಲ್ಲಿಯೇ ಇದ್ದು, ಮೊನ್ನೆಯಷ್ಟೇ ತಾ: 9-4-2015 ರಂದು ತ್ಯಾಗರಾಜನಗರದ ತಮ್ಮ ಗೃಹದಲ್ಲಿ ದೈವಾಧೀನರಾದರು. ಇವರ ನೆನಪಿನ ಜ್ಞಾಪಕಾರ್ಥ ಈ ವಿಡಂಬನೆಯ ಅಶು ಕವಿತ್ವವನ್ನು ನನ್ನಂತಹ ಓದುಗರ ಪರವಾಗಿ ದಿವಂಗತರಿಗೆ ಅರ್ಪಿಸಿದೆ. ತಪ್ಪು, ನೆಪ್ಪುಗಳನ್ನು ಕ್ಷಮಿಸುವ ಔದಾರ್ಯವಿರಲಿ.

ನಾಯಕತ್ವದಲಿ, ವೀರಾಧಿವೀರರಾಗಿ ಮೆರೆದರೋ,
ಪಾಕಿಗಳ ಜುಟ್ಟ ಹಿಡಿಹಿಡಿದು, ಫೀಲ್ಡಾಚೆಗೆ ಎಸೆದರೋ
ರೊಯ್ಯರೊಯ್ಯನೆ, ಗಮ್ಮಗಮ್ಮನೆ, ಧೀರ ಅಫಂ..ಡಿಗೆ ಪಂಗನಾಮ
ಮಿಕ್ಕವರೆಲ್ಲ ಸುಮ್ಮಸುಮ್ಮಗೆ, ಕೊಹ್ಲಿ ಆಟ ನೋಡಿ ನೋಡಿ ಅತ್ತರೋ (1)

ಅಜಿಂಕ್ಯ, ಕೊಹ್ಲಿ ಜುಗಲ್ಬಂಧಿಯ ಸಾಥಿಯಲಿ ಶಿಖರ ಧವನನು
ಸೌಥಾಫ್ರಿಕನರ ಕಗ್ಗೊಲೆ ಮಾಡಿ ಮೆರೆದನೋ ಈ ಶೂರಾಧಿ ಶೂರನು ಪ್ಲೆಸ್ಸೀಯಸ ಬಿಟ್ಟರೆ
ಡಿವಿಲ್ಲಿಯರ್ಸನೂ ವಿಲ್ಲನನಾದನೋ ಅವರ ಪಾಲಿಗೆ
ಎಲ್ಲರೂ ಚೆಂಬು ಹಿಡಿದು ಪವಿಲಿಯನಿಗೆ ಧಾಸಿಸಿದರೋ ಆತುರಾತುರದಲಿ (2)

ಇನ್ನು ಶ್ರೀಲಂಕ, ಇಂಗ್ಲೆಂಡ್, ವೆಸ್ಟಿಂಡಿಯನ್ನರುಗಳೆಲ್ಲ ಧೋನಿ ಶೈಲಿಯ
ಸೂಪರ್ನಾಯಕತ್ವಕೆ ಮೆರಗಾಗಿ ಬ್ಯಾಟ ಹಿಡಿಯದೆಯೆ ಮನೆಗೆ ಮರಳಿದರು
ಮತ್ತೈರ್ಲೆಂಡ್, ಸ್ಕಾಟ್ಲೆಂಡ್, ಎಮಿರೇಟ್ಸು ಅವರಿವರು ಚೋಟೂಗಳಿಗೆ ನಿವಾಳಿಸಿ ಧೋನಿ
ಪಡೆ ಮುನ್ನುಗ್ಗಿದರು ನಮಗ್ಯಾರು ಸರಸಮರೆನುತ ಸೆಮಿಫೈನಲ್ಸಿಗೆ (3)

ಇತ್ತ ಭಾರತದೆಲ್ಲೆಲ್ಲಾ ಕ್ರಿಕೆಟಿಗಭಿಮಾನಿಗಳು ಇವರ ಪೌರುಷಕೆ ಹಿರಿಹಿರಿ ಹಿಗ್ಗಿದರೋ
ರಸ್ತೆ ಬದಿಯಲಿ, ರಿಸಾರ್ಟುಗಳಲಿ, ಹೋಟೆಲ್ಲು, ಕ್ಲಬ್ಬುಗಳು, ಬಾರು ಎಲ್ಲೆಂದರಲ್ಲಿ
ಬಾಜಿ ಕಟ್ಟಿದರನೇಕರು ಕೋಟಿ ಕೋಟಿ ಹಣವ ಸುರಿದರೋ ಗುಪ್ತಗುಪ್ತವಾಗಿ,
ಅಸೆಂಬ್ಲಿ, ಪಾರ್ಲಿಮೆಂಟು, ಸ್ಕೂಲು ಕಾಲೇಜು ಆಫೀಸುಗಳಲಿ ಆಟ ನೋಡಿದರೋ (4)

ಅತ್ತ ಟೀವಿ ಸ್ಟುಡಿಯೋಗಳಲಿ, ತಣ್ಣಗೆ ಕೂತ ಕ್ರಿಕೆಟೆಕ್ಸಪರ್ಟಗಳು, ವಿಮರ್ಶಕರು
ಗವಾಸ್ಕರ, ಶಾಸ್ತ್ರಿ, ಸಂಜಯ, ದ್ರವಿಡ, ಹರ್ಷಬೋಗ್ಲೆ, ಅತುಲ್ ವಾಸನ, ಗಂಗೂಲಿ
ವಾಘನ, ಗ್ಯಾಟಿಂಗ, ಲಾಯ್ದು, ಪೊಲ್ಲಾಕ ಮತ್ತಿತರ ಪತ್ರಿಕಾ ಮಾಧ್ಯಮದ ಜನ
ಏನಕೇನ ಪ್ರಕಾರೇಣ ನಮ್ಮವರೆಲ್ಲರ ಪೌರುಷವ ಎತ್ತಿ ಹಾಡುತ, ಹೊಗಳುತ, ನಮ್ಮ
ಕ್ರಿಕೆಟಿಗರು ಇನ್ನಷ್ಟು ವ್ಯಾಯಾಮ ಮಾಡಿದರು, ರೈಟು, ಲೆಫ್ಟು, ಶಿಸ್ತು ಆಚರಿಸಿದರು (5)

ಸರಿಯಾದ ವೇಳೆಗೆಲ್ಲಾ ರೆಡಿ, ಟಾಸ್ ಗೆಲ್ಲಲಿಲ್ಲ ಧೋನಿ, ವಿಧಿಯದರ ಆಟ ವಾಡಿತ್ತು,
ಫಿಂಚ ಜೊತೆಗೂಡಿ ಸ್ಮಿತ್ತ ಬಾರಿಸಿದನು ಶತಕ, ಎಲ್ಲೆಲ್ಲೂ ಚೆಂಡು ಹೊಡೆದಟ್ಟಿದನು
ಯಾದವ, ಶಾಮಿ, ಶರ್ಮರೆಲ್ಲರಿಗೂ ಗಂಜಿಬೀಸು, ಜಡೇಜ, ಅಶ್ವಿನ್ನರಿಗೂ ಅದೇ ಟ್ರೀಟು
ನಮ್ಮ ವೀರಾಧಿವೀರರೆಲ್ಲ ಬ್ಯಾಟೆ ಎತ್ತರಲ್ಲ, ಝೋಮು ಹಿಡಿಯಿತೇನ ಅವರಿಗೆಲ್ಲಾ? (6)

ಶೂರರ ಶೂರ ಕೊಹ್ಲಿ ಒಂದು, ರೈನ ಏಳಕೆ ಸಾಕು, ಹದಿನಾರೇ ಜಾಸ್ತಿ ಎಂದು ಜಡೆಜ ಬಗೆದನೋ
ಮಿಕ್ಕವರು ಐವತ್ತರ ಆಸುಪಾಸೇ ಸಾಕೆಂದು, ಅವಸರ ಅವಸರದಿ ಪವಿಲಿಯಿನಿಗೆ ಧಾವಿಸಿದರೋ
ಪಿಚ್ಚಲಿ ಸುಮ್ಮಸುಮ್ಮಗೆ ನಿಲ್ಲಲೇಕೋ, ಎಮಗಿನ್ನು ಕಾದಿದೆಯೋ ಟ್ವೆಂಟಿ ಟ್ವೆಂಟಿ ಮ್ಯಾಚುಗಳೋ
ಐಪಿಎಲ್ ಪಂದ್ಯಗಳು ಜೇಬಿ ತುಂಬಿ ತುಂಬಿ, ಬ್ಯಾಂಕುಗಳೆಲ್ಲ ತನ್ನಿ ತನ್ನಿ ಎಂದು ಕರೆಯುತಿವೆಯೋ (7)

ಐಪಿಎಲ್ ವೀರರುಗಳಿವರೋ, ವರ್ಲ್ಡ್‌ಕಪ್ಪಿನಲಿ ನಸುನಾಚಿ ನೀರಾದರೋ

ರಾಜಕಾರಿಣಿಯೊಬ್ಬ ನಾಗರೀಕರ ಸಭೆಯನ್ನು ಉದ್ದೇಶಿಸಿ ಮಾತಾಡುತ್ತಿದ್ದ. ಎಲ್ಲೀವರೆಗೂ ಮೋಸ ಹೋಗೋರು ಇರ್ತಾರೋ ಅಲ್ಲೀವರೆಗೂ ಮೋಸ ಮಾಡೋ ಜನರೂ ಇರ್ತಾರೆ. ಇದಕ್ಕೆ ನಾನು ಸಾವಿರ ಉದಾಹರಣೆ ಕೊಡಬಲ್ಲೆ ಅಂದ. ಸಭಿಕರಲ್ಲೊಬ್ಬ ಎದ್ದು ನಿಂತು ನಾನು ಒಂದು ಉದಾಹರಣೆ ಕೊಡ್ಲಾ ಅಂತ ಕೇಳದ್ದಕ್ಕೆ ರಾಜಕಾರಿಣಿ ಕೊಡು ಅಂದ. ಆಗ ನಾಗರೀಕ ಎಲ್ಲೀವರೆಗೂ ದಡ್ಡ ಮತದಾರರು ಇರ್ತಾರೋ ಅಲ್ಲೀವರೆಗೂ ನರಿಬುದ್ಧಿ ರಾಜಕಾರಿಣಿಗಳು ಚುನಾಯಿತರಾಗಿ ಮತದಾರರನ್ನು ಇನ್ನಷ್ಟು ದಡ್ಡರನ್ನಾಗಿ ಮಾಡ್ತಿರ್ತಾರೆ ಅಂದ.

# Advertisement

# Advertisement

# ಹೈಟೆಕ್.....

- ಎಚ್. ಗೋಪಾಲಕೃಷ್ಣ

**ಬೆಂ**ಗಳೂರಿನ ಮತ್ತೊಂದು ಮೂಲೆಗೆ ಮೊನ್ನೆ ಹೋಗುವ ಅವಕಾಶ ಬಂದಿತ್ತು. ಈ ಮೂಲೆಯನ್ನು ನಾನು ಇದೇ ಊರಿನಲ್ಲಿಯೇ ಹುಟ್ಟಿ ಬೆಳೆದವನಾದರೂ ಈ ತನಕ ನೋಡಿಯೇ ಇರಲಿಲ್ಲ. ಬಂಧುವೊಬ್ಬರು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದರು. ಅವರನ್ನು ನೋಡಲು ಎಂದು ಹೋಗಿದ್ದು ನಾನು. ಏರಿಯಾ ಪ್ರವೇಶಿಸಿದ ಕೂಡಲೇ ನನಗೇನೋ ನಮ್ಮ ಊರನ್ನು ಬಿಟ್ಟು ಬೇರೆ ಎಲ್ಲಿಗಾದರೂ ಬಂದುಬಿಟ್ಟಿದ್ದೀನಾ ಅಂತ ಆಶ್ಚರ್ಯ ಹುಟ್ಟಿಬಿಟ್ಟಿತು. ನಾನು ನೋಡಿದ್ದ ನಮ್ಮ ಊರಿನಲ್ಲಿ ರಸ್ತೆಯ ಎರಡೂ ಕಡೆ ಮನೆಗಳು ಅಥವಾ ಅಂಗಡಿಗಳು ಇದ್ದವು. ನಡು ಮಧ್ಯೆ ಒಂದು ರಸ್ತೆ ಸೀಳಿಕೊಂಡು ಹೋಗುತ್ತಿತ್ತು ಮತ್ತು ಸಂದರ್ಭಕ್ಕೆ ತಕ್ಕ ಹಾಗೆ ವಾಸದ ಮನೆಗಳೋ ಅಂಗಡಿಗಳೋ... ಹೀಗೆ ವ್ಯವಸ್ಥಿತವಾದ ರೂಪು ಇತ್ತು. ತುಂಬಾ ಸುಲಭವಾಗಿ ನೀವು ರಸ್ತೆಯ ಈ ತುದಿಯಿಂದ ಆತುದಿಯವರೆಗೆ ಯಾವ ಮನೆ ಬೇಕೋ ಅಂಗಡಿ ಬೇಕೋ ಅದಕ್ಕೆ ಯಾರ ಸಹಾಯವೂ ಇಲ್ಲದೇ ಪ್ರವೇಶ ಪಡೆಯಬಹುದು. ಅಂತಹ ಸಿಸ್ಟಮ್ಮು ರೂಢಿಯಾಗಿತ್ತು. ಇಲ್ಲಿ ಹಾಗಲ್ಲ! ರಸ್ತೆ ಅಂಬೋದೇ ಇಲ್ಲ, ಬದಲಿಗೆ ನೀವು ಎತ್ತ ತಿರುಗಿದರೆ ಅತ್ತ ದೊಡ್ಡ ಬಿಲ್ಡಿಂಗು ಮತ್ತು ಅದರ ದೈತ್ಯ ಬಾಗಿಲುಗಳಿಗೇ ನೀವು ನೇರವಾಗಿ ನಿಂತಿರುತ್ತೀರಿ! ಇದೇನು ಬಿಲ್ಡಿಂಗುಗಳನ್ನ ಹೀಗೆ ಕಟ್ಟೋದಿಕ್ಕೆ ನಮ್ಮ ಬಿಡಿಎ ಪರ್ಮಿಷನ್ನು ಕೊಟ್ಟಿದೀಯಲ್ಲಾ ಅಂತ ಬೆರಗಾಗಿದ್ದೆ. ಅಷ್ಟರಲ್ಲಿ ಕಿವಿಗೆ ಜೋರು ಗಂಟಲಿನಲ್ಲಿ ಕೂಗುಗಳು ಕೇಳಿಸಿದವು. ಕೆಲವು ಪರಿಚಿತ ಶಬ್ದಗಳು, ಸುಮಾರು ಅಪರಿಚಿತ ಪದಗಳನ್ನು ಯಾರೋ ಜೋರುಗಂಟಲಿನಲ್ಲಿ ಅರಚುತ್ತಿದ್ದರು. ಇದು ನನಗೆ ಎರಡನೇ ದಿಗ್ಭ್ರಾಂತಿಗೆ ಕಾರಣ. ಮಾರುಕಟ್ಟೆಯಲ್ಲಿ ತರಕಾರಿ ಮಾರುವವರು ಹೀಗೆ ಜೋರಾಗಿ ಕೂಗಿ ಗಿರಾಕಿಗಳನ್ನು ತಮ್ಮೆಡೆಗೆ ಸೆಳೆಯುವುದು ಗೊತ್ತಿತ್ತು – ಆದರೆ ಇಲ್ಲಿ ಯಾರನ್ನ ಯಾಕೆ ಕೂಗ್ತಿದ್ದಾರೆ? ಒಂದೆರೆಡು ನಿಮಿಷ ಕಕವ ಆಗಿಬಿಟ್ಟೆ ಮತ್ತು ಕಣ್ಣು ಕಣ್ಣು ಬಿಡುತ್ತಾ ನಿಂತೆ!

ನಿಧಾನವಾಗಿ ಕಿವಿಗೆ ಅಪ್ಪಳಿಸುತ್ತಿರುವ ಶಬ್ದಗಳನ್ನು ಅರಗಿಸಿಕೊಳ್ಳಲು ಪ್ರಯತ್ನಿಸಿದೆ.

ಯಾರ್‍ರೀ ಫೈಲ್ಸು...? ಅಂತ ಒಂದು ಶಬ್ದ ಪುಂಜ ಕೇಳಿಸಿತು. ಹಲವಾರು ಶಬ್ದಗಳಲ್ಲಿ ಇದು ಅರ್ಥವಾದ ಶಬ್ದ! ಹೀಗೆ ಕೂಗುತ್ತಿದ್ದಾತ ಮುಂದಿನ ಬಿಲ್ಡಿಂಗಿನ ಪಕ್ಕದ ಬಿಲ್ಡಿಂಗಿನಿಂದ ಕೂಗುತ್ತಿದ್ದ. ಅದೇರೀತಿ ಸುಮಾರು ಜನ ಗಂಟಲು ಜೋರು ಇರುವವರು ಸುಮಾರು ಬಿಲ್ಡಿಂಗುಗಳಿಂದ ಯಾರ್‍ರೀ ಫೈಲ್ಸು ಅಂತಲೂ ಯಾರ್‍ರೀ..... ಅಂತಲೂ ಕಾಂಪಿಟಿಷನ್ನಿನ ಮೇಲೆ ಎನ್ನುವ ಹಾಗೆ ಜೋರು ಜೋರಾಗಿ ಅರಚ್ಕೋತಾ ಇದ್ದರು. ಯಾರ್‍ರೀ ಫೈಲ್ಸೂ ಅಂತ ಕೂಗಿದವನ ಹತ್ತಿರ ನಿಧಾನಕ್ಕೆ ನಡೆದೆ. ಅಷ್ಟರಲ್ಲೇ ನಾಲ್ಕೈದು ಜನ ಧಡಿಯರು ಬೇರೆಬೇರೆ ದಿಕ್ಕಿನಿಂದ ಓಡಿಬಂದರು, ಕನ್ನಡ ಸಿನಿಮಾಗಳಲ್ಲಿ ಟೀಷರ್ಟು ಧರಿಸಿ ನೀಲಿ ಪ್ಯಾಂಟು ತೊಟ್ಟು ಹೊಡೆದಾಟದ ಸೀನುಗಳಲ್ಲಿ ಕಾಣಿಸುತ್ತಾರೆ ನೋಡಿ ರೌಡಿಗಳು........ ರೌಡಿಗಳಿದ್ದ ಹಾಗೆ

ಇವರೂ ಇದ್ದಿದ್ದು. ಬಂದವರೇ ಅನಾಮತ್ತಾಗಿ ನನ್ನನ್ನು ಎತ್ತಿಕೊಂಡು ಇನ್ನೊಂದು ಬಿಲ್ಡಿಂಗಿನ ಕಡೆ ಓಡಿದರು! ನಾನು ಏ ಬಿಡ್ರೋ ಬಿಡ್ರೋ ಅಂತಲೂ ಬಿಡೀ ಸಾರ್ ಬಿಡೀ ಸಾರ್ ಅಂತಲೂ ಗೋಗರೀತಿದ್ದೆ. ನನ್ನ ಮಾತು ಕೇರೇ ಮಾಡದೇ ಹೊತ್ತುಕೊಂಡು ನಡೀಬೇಕಾದರೆ ಅದ್ಯಾರೋ ಇದು ನಮ್ಮ ಗಿರಾಕಿ ಅಂದದ್ದೂ, ಬೆಳಿಗ್ಗೆಯಿಂದ ಬಂದವರನ್ನೆಲ್ಲಾ ನೀನೇ ಕರ್ಕೊಂಡ್ರೆ ನಾವೇನು ಬಳೆ ತೊಟ್ಕೋಬೇಕಾ ಅಂತ ಈ ಗುಂಪಿನವರು ಹೇಳಿದ್ದೂ ಕೇಳಿಸಿತು. ಅವರವರಲ್ಲೇ ಮಾತು ಶುರುವಾಯಿತು. ಮಾತು ಅಂದರೆ ಜಗಳ! ಜಗಳಕ್ಕೆ ಅಂತ ಕೆಲವರು ಅಲ್ಲೇ ನಿಂತರು. ಇನ್ನೊಂದು ಗುಂಪು ನನ್ನನ್ನ ಈ ಬಿಲ್ಡಿಂಗಿಗೆ ಹೊತ್ತೇ ತಂದಿತು. ಒಳಗೆ ಹೊತ್ತುಕೊಂಡೇ ಹೋದರು. ಅಲ್ಲಿ ಖಾಲಿ ಇದ್ದ ಚಿಕ್ಕ ದಿವಾನದ ಮೇಲೆ ಮಲಗಿಸಿದರು. ಸುತ್ತಲೂ ಹಸಿರು ಪರದೆ – ನೋಡಿದರೆ ಅದ್ಯಾವುದೋ ಕಸಾಯಿಖಾನೆ ಇದ್ದ ಹಾಗಿತ್ತು. ನನ್ನನ್ನ ಇಲ್ಲಿ ಯಾಕೆ ಹೊತ್ತುತಂದರು? ಇವರು ಕಿಡ್ನ್ಯಾಪ್ ಮಾಡಿದ್ದಾರಾ ನನ್ನನ್ನಾ, ಕಿಡ್ನ್ಯಾಪ್ ಮಾಡಿದ್ದರೆ ಎಷ್ಟು ಕೋಟಿ ಕೊಡಿ ಅಂತ ಇವರು ಬೇಡಿಕೆ ಇಡಬಹುದು?

ಅಷ್ಟು ಕೋಟಿ ಕೊಡೋಕ್ಕೆ ಮನೇಲಿ ಅಷ್ಟು ಹಣ ಇಲ್ಲವಲ್ಲಾ. ಕೋಟಿ ಹೇಗೆ ಆರೇಂಜು ಮಾಡ್ತಾಳೆ ನನ್ನ ಹೆಂಡತಿ ಪಾಪ.... ಅವಳ ಹತ್ತಿರ ಇರೋ ಮಾಂಗಲ್ಯದ ಸರ ಮಾರಿದರೆ ಎರಡು ಸಾವಿರ ಸಿಗಬಹುದಾ? ಮನೇಲೆ ಎಷ್ಟಿರಬಹುದು? ಮನೇಲಿ ನೂರೂ ಇಲ್ಲ ಅಂತ ಕಾಣುತ್ತೆ ಇರೋ ಐವತ್ತನ್ನ ನಾನೇ ಜೇಬಲ್ಲಿ ಹಾಕ್ಕೊಂಡು ಬಂದೆನಲ್ಲಾ, ಬಸ್ ಛಾರ್ಜಿಗೆ ಅಂತ........ ನಗು ಬಂತು. ಕೋಟಿ ಕೊಡಿ ಅಂತ ಇವರು ಡಿಮ್ಯಾಂಡು ಇಟ್ಟಕೂಡಲೇ ಮನೇಲಿ ಏನಾಗಬಹುದು ಅಂತ ಮನಸ್ಸು ಅತ್ತ ಹೊರಳಿತು. ಕೊಡೋಕ್ಕೆ ಕಾಸಿಲ್ಲ ಮನೇಲಿ, ಅದರಿಂದ ನೀನೇ ಅವರ್ನ ಎಷ್ಟು ದಿವಸ ಬೇಕೋ ಅಷ್ಟು ದಿವಸ ಇಟ್ಕೋ ಅಂತ ಬಿಡಬಹುದು.. ಅನ್ನುವ ಯೋಚನೆ ಬಂದು ಹಾಹಾ ಅನಿಸಿತು. ಹಾಗಾದರೆ ಇವರು ಎಷ್ಟು ದಿವಸ ನನ್ನನ್ನು ಸಾಕಬಹುದು? ಮನೇವ್ರು ಕಾಸು ಕೊಡೋಲ್ಲ ಅಂದರೆ ಸರ್ಕಾರಕ್ಕೆ ಡಿಮ್ಯಾಂಡು ಇಡ್ತಾರಾ? ಪತ್ರಿಕೆಯವರು ಟಿವಿಯವರು ಹೇಗೆ ಈ ಸುದ್ದಿಗೆ ಹೈಲೇಟು ಮಾಡಬಹುದು? ಏಕ್ ದಂ ರಾತ್ರೋ ರಾತ್ರಿ – ಬೆಳಿಗ್ಗೆ ಆಗೋದರಲ್ಲಿ – ನಾನು ಪ್ರಸಿದ್ಧ ಆಗಿಬಿಡಬಹುದಾ?

ಯಾರೋ ಬಿಳೀ ಬಟ್ಟೆ ಧರಿಸಿದ ನರ್ಸುಗಳ ಹಾಗೆ ಕಾಣುವ ಹೆಂಗಸರು ಹತ್ತಿರ ಬಂದರು. ಒಬ್ಬಳ ಹತ್ತಿರ ಸಿರಿಂಜು ಮತ್ತು ಮಾತ್ರೆ ಪೆಟ್ಟಿಗೆ.

ಬಟ್ಟೆ ಬದಲಾಯಿಸಿ ಅಂದಳು ಮಲೆಯಾಳದಲ್ಲಿ.

ಏಕೆ ಅಂದೆ.

ಏಕೆ ಅಂದರೆ ನಮ್ಮ ಹಾಸ್ಪಿಟಲ್ಲಿನ ಡ್ರೆಸ್ಸು ಹಾಕಬೇಕು ನೀನು....

ಹಾಸ್ಪಿಟಲ್ಲಿನ ಡ್ರೆಸ್ಸು? ಯಾಕೆ? ಅಂದೆ.

ನೀನು ಪೇಷಂಟು ಅಲ್ಲವಾ ನಿನಗೆ ಆಪರೇಷನ್ನು ಮಾಡಬೇಕು ಅಲ್ಲವಾ?

ನನಗೆಂಥಾ ಆಪರೇಷನ್ನಮ್ಮಾ? ಅಂದೆ ಯಾಕೋ ಭಯ ಶುರುವಾಗಿತ್ತು.

ನರ್ಸು ಕೋಪದಿಂದ ಬಾಗಿಲಲ್ಲಿ ನಿಂತವನನ್ನು ಕೂಗಿದಳು.

ಯಾರಿದು? ಯಾರನ್ನ ಹಾಕಿದೀಯಾ?....

ಆತ ನನ್ನ ಹತ್ತಿರ ಬಂದ. ಪೈಲ್ಸಿನ ಕೇಸು ಅಲ್ಲವೇನ್ರೀ?

ಯಾರಿಗೆ ಪೈಲ್ಸು ಕೇಸು? ಅಲ್ಲೆಲ್ಲೋ ಹೋಗ್ತಾ ಇದ್ದವನು ನಾನು.... ಇಲ್ಲಿಗೆ ಎಳಕೊಂಡು ಬಂದು ಹಾಕಿದೀರಾ.... ಅಂತ ರೇಗಿದೆ.

ಎಲ್ಲೋ ತಪ್ಪಿದೆ ಅಂತ ಗೊಣಗ್ತಾ ಆಚೆ ಹೋದ. ಆಚೆ ಅವನು ಯಾರ ಹತ್ತಿರವೋ ಕೂಗಾಡಿದ್ದು ಕೇಳಿಸಿತು.

ಬೆಳಿಗ್ಗೆಯಿಂದ ಇದು ಆರನೇ ಕೇಸು ನೀನು ಹೀಗೆ ಮಿಸ್ಸಾಗಿ ತರ್ತಾ ಇರೋದು... ಹೀಗಾದರೆ ಕೆಲಸ ಕಳ್ಕೋತೀ....

ದಡಬಡ ನಾಲ್ಕೈದು ಜನ ಒಳಗೆ ಬಂದರು. ಹಾಸಿಗೆಯಿಂದ ನನ್ನನ್ನ ಅನಾಮತ್ತಾಗಿ ಎತ್ತಿದರು. ಆಚೆ ಕರಕೊಂಡು ಬಂದು ಎಲ್ಲಿ ನನ್ನನ್ನ ಹಿಡಿದಿದ್ರೋ ಅಲ್ಲೇ ಬಿಟ್ಟು ಪರಾರಿಯಾಗಲು ಯತ್ನಿಸಿದರು.

ಒಬ್ಬನ ಷರ್ಟು ಹಿಡಕೊಂಡು ಜಗ್ಗಿ ನಿಲ್ಲಿಸಿದೆ. ಇದೇನ್ರಯ್ಯಾ ನಿಮ್ಮ ಆಟ? ಎಲ್ಲೋ ಹೋಗ್ತಾ ಇದ್ದವನನ್ನ ಇಲ್ಲಿ ಎತ್ಕೊಂಡು ಬಂದು ಹಾಕಿದ್ರೀ?

ಅವನು ಕೆಕ್ಕರಿಸಿ ನನ್ನನ್ನು ನೋಡಿದ.

ಊರಿಗೆ ಹೊಸಬ್ರೋ.....

ಇಲ್ಲ ಹಳಬಾನೇ... ಈ ಏರಿಯಾಗೆ ಹೊಸ್ಬ... ಅಂದೆ. ಚೀಟಿಯ ಹಳೇಭಾಗದಲ್ಲಿ ನಾನು ತೊಂಬತ್ತು ವರ್ಷದಿಂದ ಜೀವನ ಸವೆಸ್ತಿರೋ ಕತೆ ಹೇಳಿ ಸ್ನೇಹ ಸಂಪಾದಿಸಿದೆ.

ಅವರ ಈ ಏರಿಯಾದ ವಿಶೇಷತೆ ಏನು ಅಂತ ಅವನು ವಿವರಿಸಿದ.. ಹೀಗೆ.

ಮೆಡಿಕಲ್ ಕಾಲೇಜುಗಳು, ಅದರಿಂದ ಹೊರಬರೋ ಡಾಕ್ಟರು ಹೆಚ್ಚಾದರಲ್ಲಾ, ಅವತ್ತಿಂದ ನಮಗೆ ಪೇಷಂಟ್ಸಿನ ಕೊರತೆ. ಅದೂ ಅಲ್ದೇ ಇಲ್ಲಿ ಸಾವಿರಾರು ಹೈಟೆಕ್ ಆಸ್ಪತ್ರೆ ತೆಗೆದುಬಿಟ್ಟಿದ್ದಾರೆ, ಪೇಷೆಂಟ್ಸೇ ಇಲ್ಲ.......

ಈ ರಸ್ತೆ ತುಂಬಾ ಹೈಟೆಕ್ ಹಾಸ್ಪಿಟಲ್ಸು. ಕಾಂಪಿಟಿಷನ್ನು ಜಾಸ್ತಿ... ಅದಕ್ಕೇ ಗಿರಾಕಿಗಳು ಬಂದರೆ ಯಾವ ರೋಗಕ್ಕೆ ಅಂತ ಕೂಗ್ತೀವಿ. ಅದೇ ನೀವು ಬಂದಾಗ ಕೇಳಿಸ್ತಲ್ಲಾ ಅವು ರೋಗದ ಹೆಸರುಗಳು. ಒಂದೊಂದು ರೋಗಕ್ಕೆ ನೂರು ನೂರು ಜನ ಸ್ಪೆಷಲಿಸ್ಟು ಇಲ್ಲಿದ್ದಾರೆ. ಅವರಿಗೆ ಗಿರಾಕಿ ಬೇಕಲ್ಲಾ ಅದಕ್ಕೆ ಹೀಗೆ ಪೇಷಂಟ್ಸನ್ನ ನಾವು ಹಿಡಿದು ಹಾಕೋದು........ ನಿಮ್ಮನ್ನ ಪೈಲ್ಸು ಪೇಷಂಟು ಅಂತ ಹಿಡಿದು ಇಲ್ಲಿ ತಂದು ಹಾಕಿದ್ದಾರೆ. ಅದೇತರ ಇಲ್ಲಿ ಹಾರ್ಟು, ಲಂಗ್ಸು, ಬ್ರೈನು ಇವಕ್ಕೆಲ್ಲಾ ಟ್ರೀಟ್‌ಮೆಂಟಿಗೆ ಸಾವಿರಾರು ಡಾಕ್ಟರು ಅವ್ರೆ... ಅವ್ರಿಗೆ ಗಿರಾಕಿ ಹುಡುಕೋಕ್ಕೆ ಇರೋ ಜನ ನಾವು..... ನಿಮ್ಮ ಕಡೆ ತರಕಾರಿಯವರು ಕೂಗ್ತಾರಲ್ಲಾ ಹಾಗೇ ನಾವೂ ಗಿರಾಕಿಗಳ್ನ ಹುಡುಕೋಕ್ಕೆ ಕೂಗೋದೂ............ ಥಟ್ ಅಂತ ಬಂದು ಥಟ್ ಅಂತ ಆಪರೇಷನ್ ಮಾಡಿಸ್ಕೊಂಡು ಮನೆ ಸೇರ್ಕೋಬಹುದು – ಅದು ಇಲ್ಲಿನ ವಿಶೇಷ............

ಕತೆ ಮುಗಿಸಿ, ಅದು ಸರಿ ನೀವ್ಯಾಕೆ ಇಲ್ಲಿ ಬಂದಿದ್ರಿ ಅಂತ ಕೇಳಿದ – ಈ ವೇಳೆಗೆ ನನಗೂ ಅವನಿಗೂ ಗಳಸ್ಯ ಕಂಠಸ್ಯ ಆಗಿತ್ತು.

ಬಂಧುವೊಬ್ಬರು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದು, ಅವರನ್ನು ನೋಡಲು ಎಂದು ಹೋಗಿದ್ದ ನಾನು, ಏರಿಯಾ ಪ್ರವೇಶಿಸಿದ ಕೂಡಲೇ ಈ ಕಿಡ್ನ್ಯಾಪರ್ನಿನ ಕೈಲಿ ಸಿಕ್ಕಿ ಹಾಕಿಕೊಂಡಿದ್ದು ವಿವರಿಸಿದೆ.

ಸದ್ಯ ಬಚಾವಾದ್ರೀ.......... ಇಲ್ಲ ಅಂದಿದ್ರೆ ನಿಮಗೆ ಇಲ್ದೇ ಇರೋ ಪೈಲ್ಸ್ ಆಪರೇಷನ್ನು ಮಾಡಿ ಲಕ್ಷ ಲಕ್ಷ ವಸೂಲು ಮಾಡಿಬಿಡ್ತಾ ಇದ್ದರು....... ಅಂತ ಆತ ಕೈ ಕುಲುಕಿದ.

ಬಂಧುಗಳನ್ನ ನೋಡಬೇಕಲ್ಲಾ...... ಅಂತ ಕೇಳಿದೆ.

ಬೇಡಾ ಸಾರ್, ಈಗೇನೋ ನಾನು ಸಿಕ್ಕಿದೆ – ನೀವು ಬಚಾವಾದ್ರೀ. ಇನ್ಯಾರೋ ನಿಮ್ಮನ್ನ ಹಿಡಕೊಂಡು ಹೋಗಿ ಹಾರ್ಟಿನ ಆಪರೇಷನ್ನು ಮಾಡಿಬಿಟ್ಟರೆ ಏನು ಮಾಡ್ತೀರೀ....?

ಹೌದಲ್ಲವಾ ಅನಿಸಿತು. ಬಂಧುಗಳಿಗೆ ಬೇಕಾದರೆ ಮನೇಗೇ ಬನ್ನಿ ಅಂತ ಹೇಳಬಹುದು ಅಂದುಕೊಂಡು ಮನೇಕಡೆ ದೌಢಾಯಿಸುವ ಹಾದಿ ಹುಡುಕಲು ಆರಂಭಿಸಿದೆ........

---

# ಪ್ರತಿಕ್ರಿಯೆ

ಸಂಪಾದಕರು

ಅಪರಂಜಿಯ 'ಯುಗಾದಿ ವಿಶೇಷಾಂಕ' ನೋಡಿ, ಓದಿ ಖುಷಿಯಾಯಿತು. ಎಲ್ಲ ಲೇಖನಗಳು ಉತ್ಕೃಷ್ಟವಾಗಿವೆ. ಅದರಲ್ಲೂ, ಗೌತಮ್ ಅವರ ಲೇಖನ "ಫಟಾಫಟ್ ಅಂತ ಹೇಳಿ" ಓದುತ್ತಿದ್ದಂತೆ ಕಣ್ಣಲ್ಲಿ ನೀರು ಬರುವಷ್ಟು ನಕ್ಕಿದ್ದೇನೆ. ಸೊಗಸಾದ ಕಲ್ಪನೆ, ನಿರೂಪಣೆ, ಶೈಲಿ – ಡಾ॥ ಗೊಂದಲೇಶ್ವರ್ ಪಾತ್ರದ ಸೃಷ್ಟಿ ಕಿರುತೆರೆಯ ಪಾತ್ರಗಳನ್ನೇ ಕಣ್ಮುಂದೆ ತಂತು. ಮತ್ತೆ ಮತ್ತೆ ಓದಿ ನಕ್ಕಿದ್ದೇನೆ. ಗೌತಮರಿಗೆ ಧನ್ಯವಾದಗಳು. ಇನ್ನು ದಂನಆ ರವರ "ತುಂತುರು" ಪುಟವನ್ನು ಪ್ರತಿ ಸಂಚಿಕೆಯಿಂದ ಬೇರ್ಪಡಿಸಿ ಒಂದು ಪ್ರತ್ಯೇಕ *Note Book* ಗೆ ಅಂಟಿಸಿಕೊಂಡು ಆಗಾಗ ಓದಿ ನನ್ನ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುತ್ತಿದ್ದೇನೆ. ಎಂ.ಎಸ್.ಎನ್.ರ "ಕೊಬ್ಬಿದ್ರೆ ಕೈಲಾಸ", ಶರತ್ ಕಲ್ಕೋಡರ "ಮೃಷ್ಟಾನ್ನ ಭೋಜನೋಪಾಖ್ಯಾನ" ಚೆನ್ನಾಗಿವೆ. "ರಾಜಹಾಸ್ಯ"ದ ಒಂದು ಮಾದರಿ ಪತ್ರಿಕೆ ಅಪರಂಜಿ. ಈ ರಾಜ ಪರಂಪರೆ ನೂರ್ಕಾಲ ಬಾಳಿ ಬದುಕಿ ಮೆರೆಯಲಿ.

ಗಂಗಾವತಿ ಪ್ರಾಣೇಶ್

# ನಗರದಲ್ಲಿ ಸಗಣಿ ಸ್ಫೋಟ

**- ಹಾ.ಮ್ಯ. ಸೂರಿ**

**ಮೊ**ನ್ನೆ ಬೆಳಿಗ್ಗೆ ಮನೆ ಮುಂದಿನ ಜಗಲಿ ಮೇಲೆ ಮಂದಲಿಗೆ ಹಾಸಿಕೊಂಡು ಅದರ ಮೇಲೆ ಚಕ್ಕಳ–ಮಕ್ಕಳೆ ಹಾಕಿಕೊಂಡು ದಿನ ಪತ್ರಿಕೆ ಹಿಡಿದು ದಪ್ಪಕ್ಷರ ತಲೆ ಬರಹಗಳನ್ನು ಮಾತ್ರ ಮೊದಲ ಓದಿಗೆ ಓದುತ್ತಿದ್ದೆ.

ದಿನ ಪತ್ರಿಕೇಲಿ ಯಾವ ಪುಟ ತೆಗೆದರೂ ಬಾಂಬಿನ ಸುದ್ದಿಯೇ. ಮುಂಬೈ ರೈಲು ನಿಲ್ದಾಣದಲ್ಲಿ ಭಾರೀ ಸ್ಫೋಟ, ಐವರ ದುರ್ಮರಣ, ಈ ಅನಾಹುತಕ್ಕೆ ಕಾರಣ ತಿಳಿದು ಬಂದಿಲ್ಲ.

ಉಕ್ರೇನಿನಲ್ಲಿ ಐದು ಕಡೆ ಬಾಂಬ್ ಸ್ಫೋಟಿಸಿ ನಗರದೆಲ್ಲೆಡೆ ಭೀತಿ.

ಜಪಾನಿನ ಟೋಕಿಯೋದಲ್ಲಿ ಸಿನಿಮಾ ಮಂದಿರದಲ್ಲಿ ಭಾರಿ ಸ್ಫೋಟ.

ಹೀಗೆ ಪ್ರಪಂಚದ ನಾನಾ ಕಡೆ ನಾನಾ ವಿಧದ ಬಾಂಬುಗಳ ವಿಷಯ ದಿನ ಪತ್ರಿಕೇಲಿ ದಿನಾ ಬರ್ತಾ ಇರತ್ತೆ.

ಅರೆರೆರೆ! ಇದೇನಿದು ನಾಲ್ಕನೆಯ ಪುಟದಲ್ಲಿ ''ನಗರದಲ್ಲಿ ಸಗಣಿ ಸ್ಫೋಟ!'' ಎಂದು ಅಚ್ಚು ಹಾಕಿದ್ದಾರೆ ಎಂದು ಆಶ್ಚರ್ಯದಿಂದ ಜೋರಾಗಿ ನಗುತ್ತಾ ಓದಿದೆ.

ಅಲ್ಲೇ ಬೀಡಿ ಸೇದುತ್ತಿದ್ದ ರಂಗಣ್ಣ ''ಏನು ಸ್ವಾಮಿ ಅದೂ ಸಗಣಿ ವಿಷಯಾ'' ಎಂದು ನನ್ನ ಮುಂದಿನ ಓದು ನಿಲ್ಲಿಸಿದ.

ನಾನು ಪತ್ರಿಕೆ ಪಕ್ಕಕ್ಕಿಟ್ಟು ''ನೋಡು ರಂಗಣ್ಣ ನಗರದಲ್ಲಿ ಸಗಣಿ ಸ್ಫೋಟ'' ಅಂತಿದೆ. ಈಗಿನ ಪುಣ್ಯಕೋಟಿ, ಕಾಮಧೇನು ಹಸುಗಳೆಲ್ಲ ಮೇವಿಲ್ಲದೆ ಬಹುಷಃ ಸಿಕ್ಕ ಸಿಕ್ಕದ್ದು ಮೇಯ್ತಾ ಇವೆ. ಹಾಗೇನೆ ಕೆಲವು ಹಸುಗಳು ಟಿ.ಎನ್.ಟಿ. ಡೈನಾಮೈಟ್, ಪಟಾಕಿ, ಮಿಕ್ಸೆಡ್ ನಾಡ ಆಟಂ ಬಾಂಬ್ ಇವೆಲ್ಲ ಆಧುನಿಕ ಹೊಸರುಚಿ ಎಂದು ತಿಳಿದು ಮೆಲುಕು ಹಾಕಿರಬೇಕು'' ಎಂದು ನಕ್ಕೆ.

''ಏ ಬುಡೀ ಸ್ವಾಮಿ. ಅದ್ಯಾಕೆ ನಗಾಡ್ತೀರಿ. ಹಸು ಎಮ್ಮೆ ಸಗಣಿಯಿಂದ ಗ್ಯಾಸ್ ತಯಾರಿಸಾತ ಅವ್ರೆ. ನಂದಿ ಪ್ರಸಾದ ಸಗಣೀಲಿ ಭೋ ಶಕ್ತಿ ಐತೆ. ಎ.ಬಿ.ಸಿ.ಡಿ. ಯಿಂದ ಜೆಡ್ ವರೆಗೆ ಎಲ್ಲ ವಿಟಮಿನ್ ಇದೆ'' ಎಂದ ರಂಗಣ್ಣ.

''ಅದೇನೋ ಸರಿ, ಆದರೆ ಮುಟ್ಟಿದರೆ ಪುಸ್ ಎನ್ನುವ ಮೆತ್ತನೆ ಸಗಣಿ ಯಾಕಯ್ಯಾ ಬಾಂಬಿನ ತರಹ ಸ್ಫೋಟ ಆಗತ್ತೇ... ನೋಡಿಲ್ಲಿ ನಗರದಲ್ಲಿ ಸಗಣಿ ಸ್ಫೋಟ ಅಂತ ಈ ಪತ್ರಿಕೇಲಿದೆ'' ಎಂದು ಪತ್ರಿಕೆ ತೋರಿಸಿದೆ.

ಅವನು ತನ್ನ ತಲೆ ಕೆರ್ಕೊಂಡು ''ನೀವು ಸರಿಯಾಗಿ ಓದ್ಲಿಲ್ಲ ಬುಡಿ, ನಿಮ್ಮ ಮೊಮ್ಮಗೂನ ಕರೀರಿ. ಅದು ಒಂದು ದಪ ಓದಲಿ'' ಎಂದ ಬೀಡಿ ತುಂಡು ಪಕ್ಕಕ್ಕೆ ಎಸೆಯುತ್ತಾ.

‘‘ಲೇ ಚಂದ್ರೂ, ಚಂದನ. ವಸಿ ಬಾರವ್ವಾ ಇಲ್ಲಿ, ಇದೇನು ಓದು, ಸಗಣಿ ಸ್ಫೋಟ ಅಂತ ಇಲ್ಲಿದೆ ನೋಡು’’ ಎಂದು ಪತ್ರಿಕೆ ಅವಳಿಗೆ ಕೊಟ್ಟು ಪ್ಯಾರ ತೋರಿಸಿ ಓದಲು ಹೇಳಿದೆ.

ಅವಳು ಪತ್ರಿಕೆ ತನ್ನ ಕೈಲಿ ಹಿಡಿದು ನಾನು ತೋರಿಸಿದ ಪ್ಯಾರ ಹೀಗೆ ಓದಿದಳು – ‘‘ನಗರದಲ್ಲಿ ಸರಣಿ ಸ್ಫೋಟ. ನಗರದಲ್ಲಿ ಬಸ್ ನಿಲ್ದಾಣ, ಮಾರ್ಕೆಟ್, ಆಸ್ಪತ್ರೆ ಇತ್ಯಾದಿ ಆರು ಕಡೆ ಸರಣಿ ಸ್ಫೋಟ ಆಗಿದೆ’’ ಎಂದು ಓದಿದಳು ಚಂದನ.

‘‘ತಾತ, ತಾತಾ, ನೀವು ಓದಲು ನಿಮ್ಮ ಕಣ್ಣಿಗೆ ಕನ್ನಡಕವೇ ಹಾಕಿ ಕೊಳ್ಳದೇ ‘‘ಸರಣಿ’’ ಎಂಬ ಪದವನ್ನು ‘‘ಸಗಣಿ’’ ಎಂದು ತಪ್ಪು ತಪ್ಪಾಗಿ ತಿಳಿದಿದ್ದೀರಿ ಅದಕ್ಕೇ ಸರಣಿ ಸ್ಫೋಟ ಅನ್ನೋದನ್ನ ಸಗಣಿ ಸ್ಫೋಟ ಅಂದು ಕೊಂಡಿರಿ’’ ಎಂದು ನಕ್ಕು ಓಡಿದ್ದಳು ಚಂದನ.

ರಂಗಣ್ಣ ಹಲ್ಲು ಕಿರಿದು ನಗ್ತಾ ನಗ್ತಾ ಗದ್ದೆ ಬದಿಗೆ ಕಾಲ್ಕಿತ್ತ!

## ಮೊದಲ ದಿನ

ಟ್ಯಾಕ್ಸಿ ವಿಮಾನ ನಿಲ್ದಾಣದತ್ತ ಭರದಿಂದ ಸಾಗಿತ್ತು. ಹಿಂದಿನ ಸೀಟಿನಲ್ಲಿ ಕುಳಿತಿದ್ದ ಪ್ರಯಾಣಿಕ ಡ್ರೈವರ್‌ನನ್ನು ಏನೋ ಕೇಳಲು ಮುಂದೆ ಬಾಗಿ ಅವನ ಬೆನ್ನ ಮೇಲೆ ಮೃದುವಾಗಿ ತಟ್ಟಿದ. ಆಗ ಅನಾಹುತವೇ ನಡೆದು ಹೋಯಿತು. ಕಾರಿನ ಚಾಲಕ ಹೋ ಎಂದು ಕಿರುಚಿದ. ವಾಹನ ಮೇಲೆ ನಿಯಂತ್ರಣ ತಪ್ಪಿತು. ಬಸ್‌ಗೆ ಡಿಕ್ಕಿ ಹೊಡೆಯಬೇಕಾದ್ದು ಹೇಗೋ ತಪ್ಪಿತು. ಕಾರು ಒಂದು ಗೋಡೆಗೆ ಬಡಿಯುವುದಿತ್ತು. ತಪ್ಪಿಸಿದ ಚಾಲಕ ಕಷ್ಟದಿಂದ ಕಾರನ್ನು ನಿಲ್ಲಿಸಿ “ಕ್ಷಮಿಸಿ, ನೀವು ನನ್ನ ಬೆನ್ನು ಮುಟ್ಟಿದಾಗ ನನಗೆ ಭಾರಿ ಹೆದರಿಕೆ ಆಯಿತು” ಎಂದ.

“ಸಾರಿ, ನನಗೆ ಗೊತ್ತಾಗಲಿಲ್ಲ. ಆದರೆ ನಾನು ಬೆನ್ನು ಮುಟ್ಟಿದಕ್ಕೆ ನಿಮಗೇಕೆ ಗಾಬರಿ ಆಯಿತು?” ಪ್ರಯಾಣಿಕ ಕೇಳಿದ.

“ನೀವೇಕೆ ಸಾರಿ ಕೇಳುತ್ತೀರಿ. ತಪ್ಪು ನನ್ನದೇ. ಇದೇ ಮೊದಲ ಬಾರಿಗೆ ನಾನು ಟ್ಯಾಕ್ಸಿ ಓಡಿಸುತ್ತಿದ್ದೇನೆ. ಈ 25 ವರ್ಷಗಳಿಂದ ನಾನು ಹೆಣ ಹೊರುವ ಗಾಡಿ ಓಡಿಸುತ್ತಿದ್ದೆ.”

# ಬ್ಯಾಡ್ ಬಾಸ್‌ಗಳ ಬಗ್ಗೆ

**- ನಂನಾಗ್ರಾಜ್**

**ಸಂ**ದರ್ಶನ ಶುರುವಾದಾಗ ನಾನು ಆತಂಕಗೊಂಡಿದ್ದು ನಿಜ. ಆದರೆ ಬಾಸ್ ಒಂದು ದೊಡ್ಡ ನಗೆ ಚೆಲ್ಲಿ ಆರಾಮವಾಗಿರಿ ಎಂದು ಅಭಯ ನೀಡಿದಾಗ ಮನಸ್ಸು ನಿರಾಳವಾಗಿತ್ತು. ನನ್ನ ಜಾತಕವನ್ನು (ಸಿ.ವಿ) ಪರಿಶೀಲಿಸಿದ ನಂತರ ತನ್ನ ಕಂಪನಿಯ ಬಗ್ಗೆ ಹೇಳಲು ಶುರು ಮಾಡಿದರು ಬಾಸ್.

''ನಿಮಗೆ ತುಂಬಾನೇ ಸ್ವಾತಂತ್ರ್ಯ ಇರುತ್ತೆ. ನಿಮ್ಮ ಒಳ್ಳೆಯ ಕೆಲಸಕ್ಕೆ ನಿಮಗೆ ಪೂರಾ ಕ್ರೆಡಿಟ್ ಸಿಗುತ್ತೆ. ನಾವು ಒಂದು ದೊಡ್ಡ ಅವಿಭಾಜ್ಯ ಕುಟುಂಬದ ತರಹ. ನಾನು ಹಲವು ನೀತಿ ನಿಯಮಗಳನ್ನು ಪಾಲಿಸುತ್ತೇನೆ. ಪಾರದರ್ಶಕತೆಯನ್ನು ನಾನು ಅನುಮೋದಿಸುತ್ತೇನೆ. ಕಂಪನಿಯಲ್ಲಿ ನಿಮ್ಮ ಬೆಳವಣಿಗೆಗೆ ಆಕಾಶವೂ ಮಿತಿ ಅಲ್ಲ ಹಾಗೂ ನಿಮ್ಮ ಕೆಲಸವನ್ನು ನಾನು ನೋಟಿಸ್‌ಮಾಡುತ್ತೇನೆ'' ಎಂದೆಲ್ಲಾ ಹೇಳಿ ''ನಾನು ನಿಮ್ಮೊಡನೆ ಯಾವಾಗಲೂ ಇರುತ್ತೇನೆ'' ಎಂದು ತಮ್ಮ ಮಾತು ಮುಗಿಸಿದರು.

**ಬಾಸ್ ಹೇಳಿದ್ದೆಲ್ಲಾ ಅದು ಹೇಗೆ ನಿಜವಾಯಿತು!**

ಅವರ ಮನ ಮುಟ್ಟುವ ಭರವಸೆ / ಆಶ್ವಾಸನೆಗಳನ್ನು ಕೇಳಿ ಬಹಳ ಖುಷಿ ಹಾಗೂ ದಿಗ್ಭ್ರಮೆ ಆಯಿತು.

ಬೇಜಾರು ತರಿಸಿದ ವಿಷಯ ಏನೆಂದರೆ ಬಾಸ್ ಹೇಳಿಕೆಗಳ ಗೂಢಾರ್ಥ (ವಾಸ್ತವತೆ) ಅರಿವಾಗಲು ಹೆಚ್ಚು ಸಮಯ ಬೇಕಾಗಲಿಲ್ಲ.

**ಸ್ವಾತಂತ್ರ್ಯ:** ಕೆಲಸ ಮುಗಿಸಲು ನಾವು ಎಷ್ಟು ಲೇಟಾಗಿ ಬೇಕಾದರೂ ಆಫೀಸಿನಲ್ಲಿ ಇರಬಹುದಾಗಿತ್ತು ಹಾಗೂ ಫೈಲುಗಳನ್ನು ಮನೆಗೆ ಕೊಂಡು ಹೋಗಲು ಕೂಡ ಸ್ವಾತಂತ್ರ್ಯ ಇತ್ತು. ಅಷ್ಟೇ ಏಕೆ ಭಾನುವಾರ ಮತ್ತು ಇತರ ರಜಾ ದಿನಗಳಲ್ಲಿ ಆಫೀಸಿಗೆ ಹೋಗಿ ಕೆಲಸ ಮಾಡಬಹುದಾಗಿತ್ತು.

**ಕ್ರೆಡಿಟ್:** ನಮ್ಮ ಕಠಿಣ ಪರಿಶ್ರಮಕ್ಕೆ ಬಾಸ್ ಯಾವಾಗಲೂ ತಕ್ಷಣ ಪೂರ್ತಿ ಕ್ರೆಡಿಟ್ ಕೊಟ್ಟು ಬಿಡುತ್ತಿದ್ದರು. ಕ್ಯಾಷ್ ಎಂದೂ ಇಲ್ಲ!

**ಕುಟುಂಬ:** ಒಂದು ತರಹ ನೋಡಿದರೆ ನಾವೆಲ್ಲ ಬಾಸ್ ಹೇಳಿದ್ದ ಹಾಗೆ ಅವರ ಮನೆಯವರಾಗಿ ಬಿಟ್ಟಿದ್ದೆವು. ಆಗಾಗ ಅವರ ಮನೆಯ ಕೆಲಸಗಳನ್ನು ಕೂಡ ಮಾಡುತ್ತಿದ್ದುದರಿಂದ !

ಹೌದು, ಬಾಸ್ ಕೊಟ್ಟು ತೆಗೆದುಕೊಳ್ಳುವ ನಿಯಮ ಪಾಲಿಸುತ್ತಿದ್ದರು. ನಮಗೆ ಕೆಲಸ ಕೊಟ್ಟು ತಾವು ಕ್ರೆಡಿಟ್ ತೆಗೆದುಕೊಳ್ಳುತ್ತಿದ್ದರು.

ಇದಲ್ಲದೆ, ಐನ್‌ಸ್ಟೀನ್‌ರ *Theory of Relativity*ಗೆ ಬಲು ಹತ್ತಿರವಾದ ಅವರದೇ ಒಂದು ಸಿದ್ಧಾಂತವನ್ನು ಆಚರಿಸುತ್ತಿದ್ದರು. ತಮ್ಮ ಬಂಧು ಹಾಗೂ ಬಳಗದವರನ್ನು ಆಫೀಸಿನ ದೊಡ್ಡ ಹಾಗೂ ಸೂಕ್ಷ್ಮ ಜಾಗಗಳಲ್ಲಿ ಅಧಿಕಾರ ಕೊಟ್ಟು ಕೂರಿಸಿ *Theory of Relative'ty* ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದರು!

ನಮ್ಮ ಬೆಳವಣಿಗೆಗೆ ಆಕಾಶ ಮಿತಿ ಅಲ್ಲ ನಮ್ಮ ಆಫೀಸಿನ ಸೂರು ಎಂದು ತಿಳಿಯಲು ಬಹಳ ಸಮಯ ಬೇಕಾಗಲಿಲ್ಲ.

ನಮ್ಮ ಕೆಲಸಗಳನ್ನು 'ನೋಟೀಸ್' ಮಾಡಿದ ಸಂದರ್ಭಗಳೆಂದರೆ ನಾವುಗಳು ತಪ್ಪು ಮಾಡಿದಾಗ 'ಮೆಮೋ'ಗಳನ್ನು ಕೊಟ್ಟು!

ಬಾಸ್‌ನ ಪಾರದರ್ಶಕತೆಯ ಅರಿವು ನನಗೆ ಆಗಿದ್ದು ನಾನು ಮೊದಲ ಬಾರಿ ತಪ್ಪು ಮಾಡಿದಾಗ. ಛೇಂಬರ್‌ಗೆ ನನ್ನನ್ನು ಬರಮಾಡಿ ತಮ್ಮ ರುದ್ರಾವತಾರವನ್ನು ಸೂಕ್ತ ಕಟು ಬೈಗಳ ಪಕ್ಕವಾದ್ಯದೊಡನೆ ಒಂದಿಷ್ಟೂ ಮುಚ್ಚುಮರೆಯಿಲ್ಲದೆ ನನಗೆ ದಯಪಾಲಿಸಿದಾಗ !

ಬಾಸ್‌ಗೆ ಮುಂಗೋಪವಿತ್ತು. ಅಡ್ವಾನ್ಸ್ / ರಜೆ ಅರ್ಜಿಗಳನ್ನು ಅವರ ಛೇಂಬರ್ಸ್ ತನಕ ಕೊಂಡುಹೋದವರು ಬಾಗಿಲಲ್ಲಿ ''ನಿಂತು ಹಿಂದಿರುಗಿ!'' ಎಂಬ ಫಲಕ ನೋಡಿದವರ ಹಾಗೆ ಹಿಂತಿರುಗುತ್ತಿದ್ದರು !

ಏಕೋ ಗೊತ್ತಿಲ್ಲ ಒಂದು ಸಂದರ್ಭ ನೆನಪಿಗೆ ಬರುತ್ತಿದೆ. ಒಬ್ಬ ಮಾಲೀಕ ಎಷ್ಟು ಕ್ರೂರಿಯಾಗಿರುತ್ತಾನೆ ಎಂದರೆ ಅವನು ಯಾವುದಾದರೂ ನೌಕರನನ್ನು ತೆಗೆಯುವ ಮುನ್ನ ಆ ನೌಕರನಿಗೆ ಪ್ರಮೋಶನ್ ನೀಡಿ ನಂತರ ವಜಾ ಮಾಡುತ್ತಿರುತ್ತಾನೆ. ಆ ನೌಕರ ಮತ್ತೂ ಒಳ್ಳೆಯ ನೌಕರಿ ಕಳೆದುಕೊಳ್ಳಲಿ ಎಂಬ ದುರುದ್ದೇಶದಿಂದ !

ಅನುಮಾನ ಪ್ರವೃತ್ತಿಯುಳ್ಳವನಾಗಿದ್ದರಿಂದ ಯಾವಾಗಲೂ ನಮ್ಮ ಬೆನ್ನ ಹಿಂದೆ ಇದ್ದು ತನ್ನ ಕೆಲಸಗಳನ್ನು ತ್ವರಿತವಾಗಿ ಮಾಡಿಸಿಕೊಳ್ಳಲು ನಮ್ಮ ಕತ್ತಿನ ಮೇಲೆ ಕುಳಿತು ಬಾಸ್ ''ಯಾವಾಗಲೂ ನಮ್ಮೊಡನೆ ಇರುತ್ತಿದ್ದರು''!

---

## ಪ್ರಶ್ನೋತ್ತರ

ಅಪ್ಪಾ, ನಾನು ಹುಡುಗನೊಬ್ಬನನ್ನು ಪ್ರೀತಿಸುತ್ತಿದ್ದೇನೆ. ನಾನು ಘಾನಾ ದಲ್ಲಿದ್ದೇನೆ. ಅವನು ಲಂಡನ್ನಲ್ಲಿದ್ದಾನೆ. ನಾವು ಡೇಟಿಂಗ್ ವೆಬ್‌ಸೈಟಿನಲ್ಲಿ ಭೇಟಿಯಾದೆವು. ಫೇಸ್‌ಬುಕ್‌ನಲ್ಲಿ ಪ್ರೀತಿ ಚಿಗುರಿತು. ವಾಟ್ಸ್‌ಅಪ್‌ನಲ್ಲಿ ತುಂಬಾ ಮಾತನಾಡಿದೆವು. ಸ್ಕೈಪ್‌ನಲ್ಲಿ ಅವನು ಪ್ರಪೋಸ್ ಮಾಡಿದ. ನಿಮ್ಮ ಆಶೀರ್ವಾದ ಬೇಕಾಗಿದೆ ಲಿಂಕ್ಡ್ ಇನ್ ಮೂಲಕ ಕಳಿಸಿ.

ತಂದೆ, ವಾವ್! ರಿಯಲಿ! ಹಾಗಿದ್ದರೆ ಟ್ವಿಟರ್ ಮೂಲಕ ಮದುವೆ ಮಾಡಿಕೊ. ಇ-ಬೆ ಮೂಲಕ ಮಕ್ಕಳನ್ನು ಖರೀದಿಸು. ಇಮೇಲ್ ಮೂಲಕ ಕಳಿಸು. ಗಂಡ ಸಮಸ್ಯೆ ಎನಿಸಿದರೆ ಅವನನ್ನು ಅಮೆಜಾನ್‌ನಲ್ಲಿ ಮಾರು. ಓಕೆ?

# ಹಲ್ಲಿನ ಪ್ರಕರಣ

**- ಎಸ್.ಎನ್. ಸುಬ್ಬರಾವ್**

ನನಗೆ ಕ್ರಿಕೆಟ್ ಆಟವೆಂದರೆ ಪಂಚಪ್ರಾಣ. ನನ್ನ ಎಂಟನೆಯ ವಯಸ್ಸಿನಿಂದಲೇ ಶಾಲಾ ಕ್ರಿಕೆಟ್ ಮತ್ತು ಕ್ಲಬ್ ಕ್ರಿಕೆಟ್ ಪ್ರಾರಂಭಿಸಿದೆ.

1953ರ ಸಮಯ – ನಾನು ಮೈಸೂರಿನ ಬನುಮಯ್ಯ ಶಾಲೆಗೆ ಆಡುತ್ತಿದ್ದೆ. ಹಾಗೆಯೇ ಒಂದು ಖಾಸಗೀ ಕ್ಲಬ್‌ಗೂ ಆಡುತ್ತಿದ್ದೆ. ನಮ್ಮ ಕ್ಲಬ್ ದೊಡ್ಡಕೆರೆ ಮೈದಾನದಲ್ಲಿ ಇತ್ತು. ಮ್ಯಾಟಿಂಗ್ ವಿಕೆಟ್.

ಅಂದು ಎಂದಿನಂತೆಯೇ ಬ್ಯಾಟಿಂಗ್ ಅಭ್ಯಾಸ ಮಾಡುತ್ತಿದ್ದೆ. ನನ್ನ ಸ್ನೇಹಿತ ವಸಂತ ಎಂಬುವವರು ಬೌಲಿಂಗ್ ಮಾಡುತ್ತಿದ್ದರು. ಒಂದು ಬಾಲ್ ಮುಂದೆ ನಾನು ಬ್ಯಾಟ್ ಇಟ್ಟೆ ಅದು ಸ್ಪನ್ ಆಗಿ, ನನ್ನ ಬ್ಯಾಟನ್ನು ತಪ್ಪಿಸಿಕೊಂಡು ಮುಖಕ್ಕೆ ಬಡಿಯಿತು – ಮುಂದಿನ ಮೇಲುಗಡೆ ಮೂರು ಹಲ್ಲು ಪುಡಿ ಪುಡಿಯಾಗಿ ಮುರಿದು ಬಿತ್ತು.

ಹಾಗೆಯೇ ಕ್ರಿಕೆಟ್ ಆಟವನ್ನೂ ಮುಂದುವರಿಸಿದೆ. ಬಿ.ಎ. ಡಿಗ್ರಿಯನ್ನೂ ಪಡೆದೆ.

ಯುವರಾಜ ಕಾಲೇಜು, ಮಹಾರಾಜಾ ಕಾಲೇಜುಗಳಿಗೆ ಆಡಿದೆ. ಶಾಲಾ ಕಾಲೇಜು ದಿನಗಳಲ್ಲಿ ನನ್ನನ್ನು ಕೋಟೆ ಬಾಗಿಲು ಜಯಚಾಮರಾಜೇಂದ್ರ ಗೇಟ್ ಎಂದು ಚುಡಾಯಿಸ್ತಿದ್ರು. ಕೃತಕ ಹಲ್ಲು ಕಟ್ಟಿಸುವ ಯೋಚನೆ ನಮ್ಮ ಅಣ್ಣ, ತಂದೆಯವರಿಗೆ ಬರಲೇ ಇಲ್ಲ. ಆಗಿನ ಕಾಲಕ್ಕೆ ಹಲ್ಲಿನ ವೈದ್ಯರ ಸಂಖ್ಯೆಯೂ ಕಮ್ಮಿಯೇ. ಹಾಗೇ ಶಾಲಾ ಮೇಷ್ಟ್ರು ಕೆಲಸಕ್ಕೂ ಸೇರಿದೆ – ಹೆಸರುಘಟ್ಟದ ಹೈಸ್ಕೂಲ್ ವಿದ್ಯಾರ್ಥಿ, ವಿದ್ಯಾರ್ಥಿನಿಯರು ನನ್ನನ್ನು ಮುಂದಿನ ಮೂರು ಹಲ್ಲಿಲ್ಲದ ಮೇಷ್ಟ್ರರು ಎಂದೇ ಕರೆಯುತ್ತಿದ್ದರು.

ನಾನು 1960ರ ವರ್ಷದಲ್ಲಿ ಎಚ್.ಎ.ಎಲ್. ಸೇರಿದಾಗ ಅಲ್ಲಿನ ಹಿರಿಯರೊಬ್ಬರು ಅವರೂ ಹಲ್ಲು ಕಟ್ಟಿಸಿಕೊಂಡಿದ್ದರು ಓಲ್ಡ್ ಪೂರ್‌ಹೌಸ್ ರಸ್ತೆ, ಡಾ|| ಡಿ. ಸಿಲ್ವಾ ಎಂಬುವರ ಹತ್ತಿರ ರೂ. 20ಕ್ಕೆ ಮೂರು ಹಲ್ಲು ಕಟ್ಟಿಸಿಕೊಟ್ಟರು.

ಅಂದಿನಿಂದ ನನ್ನ ಕೋಟೆ ಬಾಗಿಲು ಮುಚ್ಚಿತು. ಆ ಹಲ್ಲು 22 ವರ್ಷ ನನಗೆ ತೊಂದರೆ ಕೊಡದೆ ನನ್ನ ಮುಖ ಲಕ್ಷಣ ಚೆನ್ನಾಗಿ ಕಾಣುವಂತೆ ಮಾಡಿತು. ನನಗೆ ಮದುವೆಯೂ ಆಯಿತು. ಮಕ್ಕಳು ಆದರು. ಆ ನಂತರ ಸ್ವಲ್ಪ ಸಡಿಲ ಆಯಿತು. ನನ್ನ ಹಲ್ಲು ಕೃತಕವಾದದ್ದೆಂದು ಯಾರಿಗೂ ಹೇಳಿರಲಿಲ್ಲ. ಒಂದು ದಿನ ಎಚ್.ಎ.ಎಲ್. ಕಾಲೋನಿಯ ನನ್ನ ಸ್ನೇಹಿತರ ಶ್ರೀಮತಿಯವರು ಪ್ಲಾಸ್ಟಿಕ್ ಬುಟ್ಟಿಯಲ್ಲಿ ತರಕಾರಿಕೊಂಡು ತರುತ್ತಿದ್ದರು. ಅವರು ಹಾಸ್ಯ ಪ್ರವೃತ್ತಿಯವರು. ನಾನು, ತರಕಾರಿ ತರಲು ಹೋಗುತ್ತಿದ್ದೆ. ಅವರೂ ಸಿಕ್ಕರು. ತಮಾಷಿಯಾಗಿ ಏನೋ ಮಾತನಾಡುತ್ತಿದ್ದೆವು. ಆಗ ನನ್ನ ಮೂಗಿನಿಂದ ದೊಡ್ಡ ಸೀನು ಬಂತು. ನಾನು ಆಕ್ಷಿ ಮಾಡಿದೆ. ನನ್ನ ಕೃತಕ ಹಲ್ಲು ಹಾರಿ ಆಕೆಯ ಪ್ಲಾಸ್ಟಿಕ್ ತರಕಾರಿ ಬುಟ್ಟಿಯಲ್ಲಿ ಬಿತ್ತು.

ಅವರು ನನ್ನ ಮುಖ ನೋಡಿ 'ಏನ್ರೀ ನಿಮ್ಮ ಮುಂದಿನ ಹಲ್ಲು ಎಲ್ಲಿ' ಎಂದು ಆಶ್ಚರ್ಯ ಮತ್ತು ನಗುವಿನ ಮಿಶ್ರಣದಿಂದ ಕೇಳಿದರು. ನಾನು ಮಂಕು ಮಂಕಾಗಿ ನಿಮ್ಮ ಬುಟ್ಟಿಯಲ್ಲಿ ಎಂದು ಹೇಳಿ ಬುಟ್ಟಿಗೆ ಕೈಹಾಕಿ, ತರಕಾರಿಗಳ ಜೊತೆ, ಅಡಗಿ ಕುಳಿತ್ತಿದ್ದ ನನ್ನ ಹಲ್ಲನ್ನು ತೆಗೆದು ಬಾಯಿಗೆ ಜೋಡಿಸಿಕೊಂಡು ನಕ್ಕು ಅವರು ನಗುತ್ತಾ 'ಥೂ ನನ್ನ ತರಕಾರಿ ಎಲ್ಲಾ ನಿಮ್ಮ ಎಂಜಲಾಯ್ತು, ಎಲ್ಲವನ್ನೂ ತೊಳೀಬೇಕು' ಎಂದು ನಗುತ್ತಾ ಹುಸಿ ಕೋಪದಿಂದ ಹೋದರು.

ನಾನು ಮತ್ತು ನನ್ನ ಭಾವ-ಮೈದುನ (ನನ್ನ ಶ್ರೀಮತಿಯವರ ಅಣ್ಣಾ-ಗೆಳೆಯರು) ಇಬ್ಬರೂ ಕ್ರಿಕೆಟ್ ಆಡುತ್ತಿದ್ದೆವು. ಆದರೆ ನನ್ನ ಮುಂದಿನ ಮೂರು ಹಲ್ಲು ಕೃತಕ ಹಲ್ಲೆಂದು ಅವನಿಗೆ ಗೊತ್ತಿರಲಿಲ್ಲ - ಒಂದು ದಿನ ಈಜಲು ಅಂದಿನ ಅಗ್ರಹಾರ ತೋಟದ ಬಾವಿಗೆ ಹೋದೆವು. ಈಗಿನ ಜೆ.ಪಿ.ನಗರ. ಅವನು ಬಟ್ಟೆ ಬಿಚ್ಚಿ ಮುಂದಿನ ಮೂರು ಹಲ್ಲನ್ನು ಕಳಚಿ ಇಟ್ಟೆ ಇದೇನೊ ಎಂದೆ. ಅವನಿಗೂ ಕ್ರಿಕೆಟ್ ಆಡುವಾಗ ಚೆಂಡು ಬಿದ್ದು ಮುಂದಿನ ಮೂರು ಹಲ್ಲು ಮುರಿದಿತ್ತಂತೆ. ಈಜುವಾಗ ಹಲ್ಲು ಕಳಚಿ ಇಡಬೇಕು. ಇಲ್ಲವಾದರೆ, ನೀರಿನಲ್ಲಿ ಮುಳುಗಿ ಹೋಗುತ್ತೆ ಅಂದ.. ''ಹೌದಾ'' ಎಂದು ನನ್ನ ಹಲ್ಲನ್ನೂ ಕಳಚಿದೆ. ಅವನಿಗೆ ಆಶ್ಚರ್ಯ.

ಒಮ್ಮೆ ತಲಕಾಡು, ಸೋಮನಾಥಪುರಕ್ಕೆ ನನ್ನ ಕಾರ್ಖಾನೆ ಸ್ನೇಹಿತರ ಜೊತೆ ಹೋಗಿದ್ದೆ. ಕಾವೇರಿ ನದಿಯಲ್ಲಿ ಎಲ್ಲರೂ ಈಜಲು ಇಳಿದರು. ನಾನೂ ಇಳಿದೆ ಉತ್ಸಾಹದಲ್ಲಿ ನನ್ನ ಹಲ್ಲಿನ ವಿಷಯ ಮರೆತು ಮುಳುಗು ಹಾಕಿ ಸ್ವಲ್ಪ ದೂರ ಈಜಿದೆ. ಅಷ್ಟೇ. ಹಲ್ಲು ನದಿಯಲ್ಲಿ ಕಾವೇರಿ ಅರ್ಪಣವಾಯಿತು.

ಇದು ಸರಿ ಇಲ್ಲಾ ಅಂತ ಈಗ ಮೂರು ಸೆಟ್ ಹಲ್ಲನ್ನು ಇಟ್ಟುಕೊಂಡಿದ್ದೇನೆ. ಎಲ್ಲಿ ಹೋದರೂ ಬಾಯಲ್ಲಿ ಒಂದು ಸೆಟ್, ಬ್ಯಾಗಿನಲ್ಲಿ, ಮನೆಯಲ್ಲಿ ಒಂದು ಸೆಟ್ ಇಟ್ಟುಕೊಂಡಿದ್ದೇನೆ.

ಮೆಷಿನ್ ಅಂದ ಮೇಲೆ ಸ್ಪೇರ್ ಪಾರ್ಟ್ ಇರಲೇಬೇಕಲ್ಲವೇ!

## ಬೇರೆ ಇದೆಯೆ?

ಫ್ಯಾಷನ್‌ಪ್ರಿಯ ಹುಡುಗಿಯೊಬ್ಬಳು ಅಂಗಡಿಗೆ ಹೋಗಿ ನೋಡುತ್ತಾ ನಿಂತಳು. ಸೇಲ್ಸ್ ಹುಡುಗ ಏನು ಬೇಕು ಮೇಡಂ ಅಂತ ಕೇಳಿದ. ಹುಡುಗಿ ಒಂದು ರೌಂಡು ಅಂಗಡಿಯನ್ನು ಸುತ್ತಿ ಬಂದು ನಿಂತಳು. ಮತ್ತೆ ಸೇಲ್ಸ್ ಬಾಯ್ ಮೇಡಂ ನಿಮಗೆ ಏನು ಬೇಕು ಅಂತ ಹೇಳಿದರೆ ನಾನು ಸಹಾಯ ಮಾಡ್ತೀನಿ ಅಂದ. ಹುಡುಗಿ ಅವನನ್ನೇ ನೋಡುತ್ತಾ ನನಗೆ ಇಂಡಿಯಾ ಬಾವುಟ ಬೇಕಿತ್ತು ಅಂದಳು. ಸೇಲ್ಸ್ ಹುಡುಗ ಅಯ್ಯೋ ಅದಕ್ಕೇನು ಮೇಡಂ ಕೊಡ್ತೀನಿ ಅಂದು ಬಾವುಟಗಳನ್ನು ತೋರಿಸಿದ. ಹುಡುಗಿ ಸುಮಾರು ಹೊತ್ತು ಬಾವುಟಗಳನ್ನು ನೋಡುತ್ತಲೇ ಇದ್ದಳು. ಮತ್ತೆ ಸೇಲ್ಸ್ ಹುಡುಗ ನಿಮಗೆ ಎಷ್ಟು ಬಾವುಟ ಬೇಕು ಮೇಡಂ ಅಂತ ಕೇಳಿದ. ಅದಕ್ಕೆ ಹುಡುಗಿ ತಲೆ ಕೆರ್‍ಕೊಂಡು ನಂಗೆ 'ಒಂದೆರಡು ಬಾವುಟ ಬೇಕು ಇದರಲ್ಲಿ ಬೇರೆ ಬೇರೆ ಕಲರ್ಸು ಡಿಸೈನ್ಸು ಇದ್ದರೆ ತೋರಿಸಿ' ಎಂದು ಕೇಳುವುದೆ?

# ಚಿನ್ನದ ಪೆನ್ನಿಂದ ಬರೆದ ಹಣೆಬರಹ

**- ಡಾ|| ರುದ್ರಯ್ಯ ವಿ.**

**ಕ**ಲ್ಲೇಶಿ ಕುಗ್ರಾಮ ಕನ್ಯಾಳ ಗ್ರಾಮ ಪಂಚಾಯತಿಯ ಚೇರ್‌ಮನ್ ಚೆನ್ನಪ್ಪನ ವಂಶೋದ್ಧಾರಕ. ಅಪ್ಪನಿಂದ ಬಳುವಳಿಯಾಗಿ ಪಡೆದ ಎತ್ತರದ ನಿಲುವು. ನರಪೇತಲು ನಾರಾಯಣ. ಊಫ್ ಎಂದರೆ ಹಾರಿಹೋಗುವ ಕಡ್ಡಿ ಪೈಲ್ವಾನ. ಇಪ್ಪತ್ತರ ಪ್ರಾಯ. ಉಂಡಾಡಿ ಗುಂಡ. ಅವನ ಧಮನಿಯಲ್ಲಿ ಪ್ರವಹಿಸುತ್ತಿರುವುದು ಬಹುಶಃ ಕುಂಭ ಕರ್ಣನ ರಕ್ತ. ಅವನಿಗೆ ನಿದ್ದೆಯೆಂದರೆ ಪಂಚಪ್ರಾಣ. ತಿನ್ನುವುದರಲ್ಲಿ ಥೇಟ್ ಬಕಾಸುರ. ಕೆಲಸದಲ್ಲಿ ಮಹಾ ಮೈಗಳ್ಳ. ಹೇಳಿ ಕೇಳಿ ಬಾಯಿ ಬಡಕ. ಶುದ್ಧ ತರಲೆ ಸ್ವಭಾವ. ಗಾಂಪರ ಗುಂಪಿನ ಸರದಾರ.

ಕಲ್ಲೇಶಿ ಬರು ಬರುತ್ತಾ ರಾಯರ ಕುದುರೆಯಂತಾದ. ಅವನಿಗೆ ಆವರಿಸಿದ ಸೋಮಾರಿತನ, ಕಾಂಗ್ರೆಸ್ ಕಸದಂತೆ, ಸೊಂಪಾಗಿ ಬೆಳೆಯಿತು. ಸೋಮಾರಿತನಕ್ಕೂ ಕಲ್ಲೇಶಿಗೂ ಒಂದು ರೀತಿ ವಾಂಛಲ್ಯ. ಅವನಲ್ಲಿನ ಚಟಗಳ ಪಟ್ಟಿ ಹನುಮಂತನ ಬಾಲ.

ಮಗನ ಚಟಗಳು ಚೆನ್ನಪ್ಪನನ್ನು ಆತಂಕಕ್ಕೆ ಎಡೆಮಾಡಿದವು. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ? ಎಂಬ ಕನ್ನಡ ಗಾದೆ ಚಾಟಿ ಬೀಸಿ ಚೆನ್ನಪ್ಪನಲ್ಲಿ ಜಾಗೃತಿ ಮೂಡಿಸಿತು. ಹಾದಿ ತಪ್ಪಿದ ಮಗನನ್ನು ತಿದ್ದಿ ತೀಡಿ ಹದ್ದು ಬಸ್ತಿನಲ್ಲಿಡುವುದು ತಂದೆಯ ಪ್ರಥಮ ಕರ್ತವ್ಯ. ಮಗನನ್ನು ಅವನ ಪಾಡಿಗೆ ಬಿಟ್ಟರೆ ಎಲ್ಲಿ ಕೈತಪ್ಪಿ ಹೋದಾನೆಂಬ ಭೀತಿ. ಹಾಗೇನಾದರು ಆದರೆ ತಮಗೆ ವಿಷಪ್ರಾಶನವೇ ಗತಿ.

ಚೆನ್ನಪ್ಪನ ತಲೆಯಲ್ಲಿ ಕೋಲ್ಮಿಂಚು ಕೋರೈಸಿತು. ಮಗನ ಜೊತೆ ಕುಂತು ಪ್ರವಚನದ ಬುತ್ತಿ ಬಿಚ್ಚಿದ.

''ನೋಡಪ್ಪ ಕಲ್ಲೇಶಿ, ನೀನು ಚೊಕ್ಕ ಚಿನ್ನ ಕಣೋ. ಆದ್ರ ಹಾಳ ವ್ಯಸನಗಳು ನಿನ್ ಹಾಳ್ಮಾಡ್ಯಾವು. ನೀವುಗಳಿಂದ ವಿಮುಕ್ತನಾದ್ರ, ಜನರ ಪ್ರೀತಿಗೆ ಪಾತ್ರ ಆಗ್ತೀಯಾ. ಮನೆಯವರಿಗೆ ಕಣ್ಮಣಿ. ನಾನೊಂದು ಸೂತ್ರ ಹೇಳ್ತೀನಿ ಗಮನವಿಟ್ಟು ಕೇಳು. ನೀ ಮನಸು ಮಾಡಿದ್ರ ಅದೇನ್ ಮಹಾ?''

''ಸರಳ ಸೂತ್ರ ಏನಪ್ಪಾಂದ್ರ - ಕತ್ಲು ಕಂಬಿ ಕೀಳಾಕ ಮುಂಚೆ ಏಳ್ಬೇಕು. ಚಮ್ಮ ಮಾಡಿ ಪ್ರಾತರ್ವಿಧಿ ಮುಗಿಸಿ, ಸಟ್ನ ಸ್ನಾನ ಮಾಡ್ಕೊಂಡು, ವಿಭೂತಿ ಧರಿಸಿ, ಶಿವಶರಣನ ದರ್ಶನ ಪಡ್ಕೋಬೇಕು. ಆಮ್ಯಾಗ ನಿಂಗೆ ತಿಂಡಿ-ತೀರ್ಥ. ಶರಣನ ದರ್ಶನಕ್ಕೆ ಮನಿ ಬಾಗಿಲ ಮುಂದ ನಿಂತ್ರ ಸಾಕು.''

''ಪಕ್ಕದ್ಮನೆ ಮಾಲಿಂಗ ಮಹಾ ಶಿವಭಕ್ತ. ತನ್ನೆಲ್ಲಾ ಬೆಳಗಿನ ಕಾರ್ಯಕ್ರಮ ಚಟ್‌ಪಟ್ ಮುಗಿಸಿ ಎಂಟರ ಸುಮಾರಿಗೆ ದಗದಕ್ಕೆ ಹೊಲಕ್ಕೆ ಹೋಗ್ತಾನ. ನೀ ಸಜ್ಜಾಗಿ ಎಂಟರ ಒಳಗೇ

ಬಾಗಿಲು ಮುಂದೆ ನಿಂತ್ರ ನಿಂಗೆ ಶಿವಶರಣನ ಮುಖದರ್ಶನ ಆಗತೈತಿ.'' ನೀ ಹೀಂಗ ಮಾಡಿದ್ರ ತಿಂಗಳೊಪ್ಪತ್ನಾಗ ನಿನ್ ಅದೃಷ್ಟ ಅರಳ್ತದ ಕಣೋ.''

ಚೆನ್ನಪ್ಪ ಮಗನಿಗೆ ಭಾರಿ ಇಫೆಕ್ಟಿವ್ ಆಗಿ ಬೋಧಿಸಿ, ಅವನಲ್ಲಿ ಆತ್ಮಸ್ಥೈರ್ಯ ತುಂಬಿದ.

ಕಲ್ಲೇಶಿ ತಂದೆಯ ಸಂದೇಶವನ್ನು ಸವಾಲಾಗಿ ಸ್ವೀಕರಿಸಿ, ಸಮರೋಪಾಯ ರೀತಿಯಲ್ಲಿ ಕಾರ್ಯಾಚರಣೆಗೆ ಇಳಿಸಿದ. ಒಂದು ತಿಂಗಳು ನಿರ್ವಿಘ್ನವಾಗಿ ಸಾಗಿತು. ಅವನಲ್ಲಿದ್ದ ಅಪ್ರಿಯ ವ್ಯಸನಗಳು ಹೇಳ ಹೆಸರಿಲ್ಲದಂತೆ ನಾಪತ್ತೆ!

ಕಲ್ಲೇಶಿ ಈಗ ತನ್ನ ಆಜ್ಞಾಪಾಲಿಸುವ ಕೋಲೆಬಸವ. ಬೆರಗುಗೊಳಿಸುವ ಬದಲಾವಣೆ ಕಂಡು ಚೆನ್ನಪ್ಪ ಬೆಕ್ಕಸ ಬೆರಗಾದ! ಇಷ್ಟು ತೀವ್ರವಾಗಿ ತನ್ನ ಮಗ ಬದಲಾಗುವನೆಂದು ಕನಸಲ್ಲೂ ಅಂದುಕೊಂಡಿರಲಿಲ್ಲ. ಮಗನ ಮೇಲಿನ ಅಭಿಮಾನದಿಂದ ಬೀಗಿದ್ದೇ ಬೀಗಿದ್ದು. ಅವನನ್ನು ಬಾಯಿತುಂಬಾ ಕೊಂಡಾಡಿದ.

ಅದೊಂದು ದಿನ ಕಲ್ಲೇಶಿ ದಿನಚರಿಯಲ್ಲಿ ಏರುಪೇರಾಯ್ತು. ಕಲ್ಲೇಶಿಗೆ ಯಕ್ಷಗಾನದ ಖಯಾಲಿ. ಯಕ್ಷಗಾನ ಎಲ್ಲೇ ನಡೆಯಲಿ, ಅಲ್ಲಿ ಕಲ್ಲೇಶಿ ಪ್ರತ್ಯಕ್ಷ!

ಅಂದು ಊರಲ್ಲಿ ಹರಕೆ ಆಟ ಹಮ್ಮಿಕೊಂಡಿದ್ದರು. ಅದನ್ನು ತಪ್ಪಿಸಿಕೊಳ್ಳೋ ಛಾನ್ಸ್ ಇಲ್ಲ. ಕಲ್ಲೇಶಿ ಯಕ್ಷಗಾನ ಸಂಪೂರ್ಣ ವೀಕ್ಷಿಸಿ, ಮನೆಗೆ ಮರಳಿದಾಗ ಬೆಳಗಿನ ನಾಲ್ಕು ಗಂಟೆ. ಒಂದಿಷ್ಟು ನಿದ್ದೆ ತೆಗೆಯಲು ಒರಗಿದ. ಅವನಿಗೆ ಗಾಢ ನಿದ್ದೆ ಆವರಿಸಿತು. ಥಕ್ಕನೆ ಎಚ್ಚರವಾದಾಗ ಮುಂಜಾನೆ ಹತ್ತು ಗಂಟೆ!

ಕಲ್ಲೇಶಿ ಲಗುಬಗೆಯಲ್ಲಿ ಪ್ರಾತರ್ವಿಧಿ ಮುಗಿಸಿ, ಜಟ್ ಪಟ್ ಸ್ನಾನ ಮಾಡಿ, ವಿಭೂತಿ ಧರಿಸಿಕೊಂಡು, ಶರಣನ ಮುಖ ನೋಡಲೆಂದು, ಮನೆ ಬಾಗಿಲ ಮುಂದ ನಿಂತ.

ಊಹೂಂ....! ಹತ್ತು ನಿಮಿಷ ಕಳೆದರೂ ಶರಣನ ಸುಳಿವೇ ಇಲ್ಲ. ಕಲ್ಲೇಶಿಗೆ ಸಂದೇಹ ಬಂದು, ಪಕ್ಕದ ಮನೆ ಕಡೆ ದೃಷ್ಟಿ ಹರಿಬಿಟ್ಟ, ಒಮ್ಮೆಲೇ ಎದೆ ಧಸಕ್ಕೆಂದಿತು! ಅಲ್ಲೇನಿದೆ ಮಣ್ಣಾಂಗಟ್ಟಿ! ಬಾಗಿಲಿಗೆ ನೇತಾಡುವ ಬೀಗ ಕಲ್ಲೇಶಿ ನೋಡಿ ಕಿಸಕ್ಕನೆ ನಕ್ಕಂತಾಯಿತು. ಶಿವಶರಣ ಹೊಲದಲ್ಲಿ ದಗದ ಮಾಡುವುದರಲ್ಲಿ ಮುಳಿಗಿರಬಹುದು. ಶಿವಶರಣನ ಮುಖದರ್ಶನ ತನಗೆ ಸಿಗದಿದ್ದರೆ, ಹೊಟ್ಟೆಗೆ ತಣ್ಣೀರ ಬಟ್ಟೆ ಗತಿ!

ಏನು ಮಾಡುವುದು...? ಮಾಡೋದೇನು ಬಂತು. ಶರಣನ ಮುಖ ನೋಡಬೇಕೆಂದರೆ ತಾನು ಹೊಲಕ್ಕೆ ಹೋಗಲೇ ಬೇಕು. ಸದ್ಯ ಆತನ ಹೊಲದ ದಾರಿ ತನಗೆ ಗೊತ್ತು. ಕಲ್ಲೇಶಿ ತಡಮಾಡದೆ ಹೊಲಕ್ಕೆ ಫೇರಿ ಕಿತ್ತ.

ಹೊಲದ ಸಮೀಪ ಬಂದಾಗ, ಮಾಲಿಂಗ ಹೊಲದಲ್ಲಿ ನಟ್ಟು ಕಡಿಯುವುದು ಕಲ್ಲೇಶಿ ಕಣ್ಣಿಗೆ ರಾಚಿತು.

ಮಾಲಿಂಗ ತದೇಕ ಚಿತ್ತದಿಂದ ಬಾಗಿ ನಟ್ಟು ಕಡಿಯುತ್ತಿರುವಾಗ 'ಟಣ್' ಎಂಬ ವಿಚಿತ್ರ ಧ್ವನಿ ತೇಲಿಬಂತು. ಓ ಮೈ ಗಾಡ್! ಮಾಲಿಂಗ ಬಾಯಿಂದ ಉದ್ಗಾರ ಹೊರಬಿತ್ತು. ಅವನ ಹೃದಯ ಢಬ ಢಬಾ! ಕುತೂಹಲದಿಂದ ಧ್ವನಿಯ ಜಾಡು ಹಿಡಿದು ನೋಡಿದ. ನಂಬಿಗೆ

ಸಾಲದೆ ಮತ್ತೆ ಮತ್ತೆ ನೋಡಿ ಪರೀಕ್ಷಿಸಿದ. ಅವನ ಅದೃಷ್ಟ ಅರಳಿತ್ತು. ಮಾಲಿಂಗನ ಕಣ್ಣೆದುರು ಗುಪ್ತ ನಿಧಿಯ ಕೊಡಪಾನ!

ಅದೃಷ್ಟ ಅಂದ್ರ ಇದಪ್ಪಾ! ದೇನೇವಾಲಾ ಜಬ್ ದೇತಾ, ಛಪ್ಪಡ ಫಾಡಕೆ. ತಾನೀಗ ಕರೋಡಪತಿ. ಜೀವನವನ್ನು ಬಿಂದಾಸ್ ಆಗಿ ಕಳೆಯಬಹುದು.

ಯಾರದಾದರೂ ಕಾಕದೃಷ್ಟಿ ನಿಧಿಗೆ ತಗಲಿದರೆ ಅವನಿಗೆ ತುಸು ದಿಗಿಲಾಯಿತು. ನಿಧಿಯ ವಾಸನೆ ನರಪಿಳ್ಳೆಗೂ ಬಡಿಯದಂತೆ ಬಚ್ಚಿಡಬೇಕೆಂದು, ಪರ್ಫೆಕ್ಟ್ ಪ್ಲಾನ್ ಯೋಚಿಸಿದ. ಮಾಲಿಂಗನ ಬ್ಯಾಡ್ ಲಕ್! ಅಲ್ಲಿಯ ಸನ್ನಿವೇಶಕ್ಕೆ ಒಂದು ವಿಚಿತ್ರ ತಿರುವು ಎದುರಾಯಿತು.

ಕಲ್ಲೇಶಿ ಸಿದ್ದಲ್ಲದೆ ಬಂದು, ಬಗ್ಗಿ ನಿಂತಿದ್ದ ಮಾಲಿಂಗನ ಮುಖ ಬಾಗಿ ನೋಡಿದ. ಬಳಿಕ ನೋಡಿದೆ... ಚೆನ್ನಾಗಿ ನೋಡಿದೆ. ಆರ್ಕಿಮಿಡಸ್‌ನಂತೆ ಬೊಬ್ಬೆ ಹೊಡೆಯುತ್ತ ಅಲ್ಲಿಂದ ಕಂಬಿ ಕಿತ್ತ.

ಆ ಕೀರಲು ಧ್ವನಿ ಮಾಲಿಂಗನ ಕಿವಿಗೆ ಸುನಾಮಿ ಅಲೆಯಂತೆ ಅಪ್ಪಳಿಸಿತು! ಅವನು ಕಕ್ಕಾಬಿಕ್ಕಿ! ಎದೆ ಝಲ್ಲೆಂದಿತು. ಪಕ್ಕದಲ್ಲೇ ಬಾಂಬು ಬಿದ್ದಷ್ಟು ಬೆದರಿದ! ಜಲಜಲನೇ ಬೆವತು ಹೋದ. ಯಾವುದು ನಡೆಯಬಾರದೆಂದು ತಾನು ಎಣಿಸಿದ್ದನೋ, ಚಿಟಿಕೆ ಹೊಡೆಯುವುದರಲ್ಲಿ ನಡೆದಿತ್ತು. ಅವನ ಮನದಲ್ಲಿ ಪ್ರಶ್ನೆಗಳ ತಾಕಲಾಟ. 'ಕಲ್ಲೇಶಿ ಇದ್ದಕ್ಕಿದ್ದಂತೆ ಇಲ್ಲಿಗ್ಯಾಕ ಬಂದ? ಅವ್ನಿಗೇನಿತ್ತು ಹರ್ಕತ್ತು? ಅವನಿಗ್ಯಾವ ಕೆಟಬ್ಯಾನಿ ಅಮರಿತ್ತು? ಇದೇ ಶುಭಮುಹೂರ್ತ ಬೇಕಾಗಿತ್ತಾ? ಅವನ ಆಗಮನ ತನ್ನ ಪ್ಲಾನ್ ಫ್ಲಾಪ್ ಮಾಡಿತು. ಅವನು ನಿಧಿ ಸಮಾಚಾರವನ್ನು ಊರ ತುಂಬಾ ತುತ್ತೂರಿ ಊದಿ ಬಿಟ್ಟರೆ... ನಿಧಿ ತನಗೆ ಮರೀಚಿಕೆ!' ಹೀಗಾಗ ಕೂಡದು.

ಮಾಲಿಂಗನ ಮೈಯಲ್ಲಿ ದೆವ್ವ ಹೊಕ್ಕಂತಾಗಿ, ಕಲ್ಲೇಶಿಯನ್ನು ಬೆನ್ನಟ್ಟಿ ಹಿಡಿದೇ ಬಿಟ್ಟ. ಬಳಿಕ ಅವನನ್ನು ಬಲವಂತದಿಂದ ಎಳೆದು ತಂದು ನಿಧಿಯ ಸ್ಥಳದಲ್ಲಿ ನಿಲ್ಲಿಸಿದ.

''ಕಲ್ಲೇಶಿನೀಅಗ್ದಿ ಜಾಣ ಹುಡುಗ. ನಾನು ಹೇಳಿದಾಂಗ ಮಾಡ್ತೀಯಾ'' ಮಾಲಿಂಗ ಕೂಲಾಗಿ ಕೇಳಿದ.

''ಆಯ್ತು ಶರಣರೇ. ನಿಮ್ ಮಾತ್ನ ಮೀರಾಕ ಬರ್ತದೇನ್ರಿ. ಅದೇನ್ ಸಟ್ನ ತಿಳಿಸ್ರಿ'' ಕಲ್ಲೇಶಿ ಕೂಲಾಗಿ ಪ್ರತಿಕ್ರಿಯಿಸಿದ.

''ನಂಗೆ ನಿಧಿ ಸಿಕ್ಕ ವಿಷ್ಯ ನಿನ್ ಬಿಟ್ರ, ಮತ್ಯಾರಿಗೂ ಗೊತ್ತಿಲ್ಲ. ಈ ಸಂಗ್ತಿನ ನೀ ಊರಿಡೀ ಪುಕಾರು ಎಬ್ಬಿಸಿದ್ರ, ಸರ್ಕಾರ ನಿಧಿನ ಹೈಜಾಕ್ ಮಾಡ್ತದ. ನಮ್ಗೆ ಸಿಗೋದು ಮಣ್ಣು ಹೀಂಗ ಆಗೋದು ನಿಂಗೆ ಬೇಕಾ? ಅದು ಸರೀನಾ?''

''ನೀ ಮಾಡ್ಬೇಕಾಗಿರೋದು ಇಷ್ಟು, ನಿಧಿ ಬಗ್ಗೆ ನೀ ಚಕಾರ ಎತ್ತಕೂಡದು. ನಾವಿಬ್ರು ಅದನ್ ಹಂಚಿಕೊಳ್ಳೋಣ. ನಿನ್ ಪಾಲು ತಗೊಂಡು ಹೋಗಿ ನಿನ್ ಅಪ್ಪನ ಮುಂದ ಸುರಿ. ಇಲ್ಲಿಯ ಕಥೆನ ವಿಷದಪಡಿಸು'' ಮಾಲಿಂಗ ತಿಳಿಸಿದ. ಕಲ್ಲೇಶಿಗೆ ಶರಣರ ಮಾತಿನಲ್ಲಿ

ಹುರುಳಿದೆ ಎನಿಸಿತು. ಮಾಲಿಂಗ ಕಲ್ಲೇಶಿಯನ್ನು ಪಿಕ್ಸ್ ಮಾಡಿ, ನಿಧಿಯ ಅರ್ಧ ಪಾಲನ್ನು ಅವನಿಗೆ ಕೊಟ್ಟು ಮನೆಗೆ ದಬ್ಬಿದ.

ಸೆಟವಿ ಕಲ್ಲೇಶಿ ಹಣೇಬರಹವನ್ನು ಚಿನ್ನದ ಪೆನ್ನಿಂದ ಬರೆದಿರಬೇಕು. ದುಡಿಯದೇ – ದುಕ್ಕು ಬಡಿಯದೇ ಹೂವೆತ್ತಿದಷ್ಟು ಸುಲಭದಲ್ಲಿ ನಿಧಿ ದೊರಕಿತ್ತು. ಛಾನ್ಸ್ ಅಂದ್ರ ಇದಪ್ಪಾ.

ಕಲ್ಲೇಶಿ ಬಾಯಿಮುಚ್ಚಿಕೊಂಡು, ಮನೆಗೆ ಬಂದು, ತಂದ ನಿದಿಯನ್ನು ತಂದೆ ಮುಂದೆ ಸುರುವಿ, ನಡೆದ ಕಥೆಯನ್ನು ಒಂದೇ ಉಸಿರಿನಲ್ಲಿ ಉಸಿರಿದ.

ಅಷ್ಟೊಂದು ನಿಧಿ ಕಂಡು ಚೆನ್ನಪ್ಪ ಬೆಕ್ಕಸ ಬೆರಗಾದ! ಯುದ್ಧಗೆದ್ದ ಸಂತಸ, ಸಂಭ್ರಮ, ಸಡಗರ!

''ಕಲ್ಲೇಶಿ ನೋಡಿದ್ಯಾ ಶಿವಶರಣನ ಮಹಿಮೆ. ನಿಧಿ ನಿಂಗೆ ಪ್ರಾಪ್ತವಾಗಿದ್ದು ಶರಣನ ದರ್ಶನಾ ಫಲ. ಒಂದು ವ್ಯಾಳೆ ನೀನೇ ಶಿವಶರಣನಾದ್ರ....!''

ಆಧಾರ – ಕೇಳಿದ್ದು

# ಮದುವೆಗೆ ಮುನ್ನ

ಇಂಟರ್‌ನೆಟ್‌ನಿಂದ : ಹ.ನ. ವೇಣು

ಅವನು : ಅಬ್ಬಾ, ಅಂತೂ ಆಯಿತಲ್ಲ, ಕಾಯುವುದು ಬಹಳ ಕಷ್ಟವಾಗಿತ್ತು
ಅವಳು : ಎಂದಾದರೂ ನನ್ನನ್ನು ಬಿಟ್ಟು ಹೊರಟುಹೋಗ್ತೀಯಾ
ಅವನು : ಖಂಡಿತಾ ಇಲ್ಲ, ಹಾಗೆಲ್ಲ ಯೋಚನೆ ಮಾಡಲೇ ಬೇಡ
ಅವಳು : ನೀನು ನನ್ನನ್ನು ಪ್ರೀತಿಸುತ್ತೀಯಾ
ಅವನು : ಖಂಡಿತಾ, ಎಷ್ಟು ಸಲ ಅದನ್ನು ಮಾಡಿದೀನಿ
ಅವಳು : ಎಂದಾದರೂ ನನಗೆ ಮೋಸ ಮಾಡಿದ್ದೀಯ
ಅವನು : ಖಂಡಿತಾ ಇಲ್ಲ ಯಾಕೆ ಹಾಗೆ ಕೇಳ್ತಾ ಇದೀಯ
ಅವಳು : ನನ್ನ ಮುದ್ದು ಮಾಡ್ತೀಯ
ಅವನು : ಖಂಡಿತಾ ಸಮಯ ಸಿಕ್ಕಾಗಲೆಲ್ಲ
ಅವಳು : ನನ್ನ ಹೊಡೀತೀಯ
ಅವನು : ನೀನು ಕ್ರೇಜಿನಾ ನಾನು ಅಂಥಾ ಮನುಷ್ಯ ಅಲ್ಲ
ಅವಳು : ನಾನು ನಿನ್ನ ನಂಬಲಾ
ಅವನು : ಯಸ್ ಪ್ಲೀಸ್
ಅವಳು : ಡಾರ್ಲಿಂಗ್

ಮದುವೆ ನಂತರ : ಕೆಳಗಿಂದ ಮೇಲಕ್ಕೆ ಓದಿಕೊಂಡು ಹೋಗಿ

# ಲೆಕ್ಕವೇಕೆ ಅಕ್ಕರೆಗೆ

**- ಬೇಲೂರು ರಾಮಮೂರ್ತಿ**

ನಮಗೆ ಕೆಲವರನ್ನು ಕಂಡರೆ ಸುಮ್ಮಸುಮ್ಮನೆ ತಾತ್ಸಾರ ಬರುತ್ತದೆ. ಉದಾಹರಣೆಗೆ ಭಿಕ್ಷುಕರು, ಮಾರಾಟ ಪ್ರತಿನಿಧಿಗಳು. ಅವರ ಮೇಲೆ ಸುಮ್ಮಸುಮ್ಮನೇ ರೇಗುವಂತಾಗುತ್ತದೆ. ಪಾಪ ಅವರು ಹೊಟ್ಟೆ ಹೊರ್ಕೊಳೋಕೆ ಏನಾದರೂ ಮಾಡಲೇಬೇಕು ಅಂತ ವಿಧಿಯಿಲ್ಲದೇ ಯಾವುದೋ ಒಂದು ಕಡೆ ಸ್ಥಿರವಾಗಿರುತ್ತಾರೆ. ಸುಬ್ಬರಾವ್ ಮನೆ ರಸ್ತೆಯ ಕೊನೇಲಿ ಒಬ್ಬ ಭಿಕ್ಷುಕ ಸುಮಾರು ವರ್ಷಗಳಿಂದ ಕೂತ್ಕೊಂಡಿರ್‍ತಾನೆ. ಏನಯ್ಯಾ ಗಟ್ಟಿಮುಟ್ಟಾಗಿದೀಯ ಏನಾದರೂ ಕೆಲಸ ಮಾಡಬಾರದಾ ಅಂತ ಎಷ್ಟೋ ಜನ ಬೈದರೂ ಅಷ್ಟೋ ಇಷ್ಟೋ ದುಡ್ಡು ಕೊಟ್ಟು ಹೋಗ್ತಿರ್‍ತಾರೆ. ಸುಬ್ಬರಾವ್ ಮನೆ ರಸ್ತೇಲಿ ಈ ಕಡೆ ಹದಿನೆಂಟು ಮನೆ ಆ ಕಡೆ ಹದಿನೆಂಟು ಮನೆ ಇದೆ. ಯಾರನ್ನಾದರೂ ಕೇಳಿ ನೋಡಿ ನಿಮ್ಮ ಪಕ್ಕದ ಮನೇಲಿ ಇರೋರು ಯಾರು ಅಂತ. ಅವರಿಂದ ಬರೋ ಉತ್ತರ ನನಗೆ ಗೊತ್ತಿಲ್ಲ ನನಗೆ ಬೇಕಾಗೂ ಇಲ್ಲ. ಆದರೆ ಆ ಭಿಕ್ಷುಕನನ್ನು ಕೇಳಿ ಒಂದೊಂದು ಮನೆಯ ಎಲ್ಲಾ ವಿವರಗಳನ್ನೂ ಹೇಳಿಬಿಡ್ತಾನೆ.

ಪ್ರಪಂಚ ಬದಲಾಗ್ತಿದೆ, ಯಾವುದನ್ನೂ ಹೀಗೇ ಆಗಬೇಕು ಅಂತ ನಾವು ನಿರ್ಧಾರ ಮಾಡೋಕೆ ಆಗಲ್ಲ, ಹೇಗೋ ಒಂದು ನಡ್ಕೊಂಡು ಹೋಗ್ಲಿ ಅಂತ ಸುಮ್ಮನಿದ್ದುಬಿಡಬೇಕು. ಸುಬ್ಬರಾವ್ ಮತ್ತು ಅವರ ಪತ್ನಿ ಇಬ್ಬರೂ ಕೆಲಸಕ್ಕೆ ಹೋಗ್ತಾರೆ. ಅವರಿಗೆ ಹತ್ತು ವರ್ಷದ ಒಬ್ಬ ಮಗ ಇದಾನೆ. ಮೂರು ಜನರ ಹತ್ತಿರವೂ ಮನೆಯ ಬೀಗದ ಕೀ ಇದೆ. ಮಗ ಮೊದಲು ಬರ್‍ತಾನೆ ನಂತರ ಸುಬ್ಬರಾವ್ ಬರ್‍ತಾರೆ ಆನಂತರ ಅವರ ಹೆಂಡ್ತಿ ಬರ್‍ತಾರೆ. ಅವತ್ತು ಸುಬ್ಬರಾವ್ ಮನೆಗೆ ಬಂದಾಗ ಮನೆ ಬೀಗ ಹಾಕೇ ಇತ್ತು. ಏನಿದು ಮಗ ಇನ್ನೂ ಸ್ಕೂಲಿಂದ ಮನೆಗೆ ಬಂದೇ ಇಲ್ವಾ ಎಲ್ಲಿ ಹೋದ ಅಂದ್ಕೊಂಡು ಮನೆ ಬಾಗಿಲು ತೆಗೆಯೋ ಹೊತ್ತಿಗೆ ಪಕ್ಕದ ಮನೆಯವರು ಬೇಕು ಬೇಡದಂತೆ ಯುವರ್ ಸನ್ ಮೆಟ್ ವಿತ್ ಎನ್ ಆಕ್ಸಿಡೆಂಟ್ ದಟ್ ಬೆಗ್ಗರ್ ಟುಕ್ ಹಿಂ ಟು ದ ಹಾಸ್ಪಿಟಲ್ ಅಂದು ಒಳಗೆ ಹೋಗಿ ಬಾಗಿಲು ಹಾಕಿಕೊಂಡರು. ಭಿಕ್ಷುಕ ಇದ್ದ ಸ್ಥಳದಲ್ಲಿ ಇರಲಿಲ್ಲ, ಸುಬ್ಬರಾವ್ ಅಲ್ಲಿಗೆ ಓಡಿದರು. ಆಕ್ಸಿಡೆಂಟ್ ಹೇಗಾಯ್ತು, ಮಗನಿಗೆ ಏನಾಗಿದೆ, ಯಾವ ಆಸ್ಪತ್ರೆಗೆ ಕರ್ಕೊಂಡು ಹೋಗಿದಾನೆ ಅಂತ ಕೇಳೋಣ ಅಂದ್ರೆ ಅವರು ಆಗಲೇ ಬಾಗಿಲು ಹಾಕಿಕೊಂಡಾಗಿತ್ತು.

ತಕ್ಷಣ ಹೆಂಡ್ತಿಗೆ ಫೋನ್ ಮಾಡಿದರು. ಅವಳೂ ಗಾಬರಿಯಿಂದ ಸ್ವಲ್ಪ ನೋಡ್ರೀ ಯಾರನ್ನಾದರೂ ಕೇಳಿ ನಾನು ಈಗಲೇ ಬರ್‍ತೀನಿ ಅಂದಳು. ಅಷ್ಟೊತ್ತಿಗೆ ಮನೆ ಮುಂದೆ ಆಟೋ ಬಂದು ನಿಂತಿತು. ಅದರಿಂದ ಮಗನೂ ಕೆಳಗಿಳಿದ ಭಿಕ್ಷುಕನೂ ಕೆಳಗಿಳಿದ. ಏನಾಯ್ತೋ ಸತೀಶ, ಅಂತ ಸುಬ್ಬರಾವ್ ಗಾಬರಿಯಿಂದ ಕೇಳಿದಾಗ ಭಿಕ್ಷುಕನೇ ಏನೂ ಆಗಿಲ್ಲ, ನಿಮ್ಮ ಮಗ

ಸ್ಕೂಲಿಂದ ವ್ಯಾನ್‌ನಲ್ಲಿ ಇಳಿದು ಮನೆ ಕಡೆ ಹೊರಟಿದ್ದಾಗ ಯಾರೋ ಸ್ಕೂಟರಿನವನು ಗುದ್ದಿ ಹೊರಟೇಹೋದ. ನಿಮ್ಮ ಮಗ ಪ್ರಜ್ಞೆ ತಪ್ಪಿದ. ಕಾಲಿಗೆ ಕೈಗೆ ಗಾಯವಾಗಿತ್ತು. ತಲೆಗೆ ಮೂಗು ಪೆಟ್ಟು ಬಿದ್ದಿತ್ತು. ತಕ್ಷಣ ನಾನು ಆಸ್ಪತ್ರೆಗೆ ಕರ್ಕೊಂಡು ಹೋದೆ. ಅವರು ಇಂಜಕ್ಷನ್ ಕೊಟ್ಟಿದಾರೆ, ಮಾತ್ರೆ ಕೊಟ್ಟಿದಾರೆ ಮೂಳೆ ಮುರಿದಿಲ್ಲ. ಏನೂ ತೊಂದರೆಯಿಲ್ಲ. ಸ್ವಲ್ಪ ತರಚು ಗಾಯ ಆಗಿದೆ. ಹುಡುಗ ಗಾಬರಿಯಾಗಿದಾನೆ ಅಂದ್ರು. ತಗೋಳಿ ಡಾಕ್ಟರ ಚೀಟಿ, ಮಾತ್ರೆ ಅಂದು ಸುಬ್ಬರಾವ್ ಕೈಗೆ ಕೊಟ್ಟ. ಸತೀಶ ಭಿಕ್ಷುಕನಿಗೆ ಕೈ ಮುಗಿದು ಮನೆಯೊಳಗೆ ಹೊರಡುವಾಗ ಅಮ್ಮನೂ ಬಂದಳು. ಅವಳೇ ಮಗನನ್ನು ಒಳಗೆ ಕರ್ಕೊಂಡು ಹೋದಳು.

ಈ ಹಿಂದೆ ಕೂಡಾ ಸುಬ್ಬರಾವ್ ಭಿಕ್ಷುಕನಿಗೆ ಬಾಯಿಗೆ ಬಂದ ಹಾಗೆ ಬೈದಿದಾರೆ. ಅರ್ಜೆಂಟಲ್ಲಿರುವಾಗಲೇ ಅವನು ಕೈ ಒಡ್ಡ್ತಾನೆ. ಯಾರತ್ರನಾದ್ರೂ ಮುಖ್ಯವಾದ ವಿಷಯ ಮಾತಾಡುವಾಗ್ಲೇ ಕೈ ಒಡ್ಡ್ತಾನೆ. ಹೀಗಾಗಿ ಸುಬ್ಬರಾವ್ ಬೈದಿದಾರೆ. ಭಿಕ್ಷುಕ ತನ್ನ ಕೆಲಸ ಮುಗೀತು ಅಂತ ಅವನ ಜಾಗಕ್ಕೆ ಹೊರಟಾಗ ಸುಬ್ಬರಾವ್ ಅವನನ್ನು ಕರೆದು ಏನಪ್ಪಾ ಆಟೋಗೆ ಆಸ್ಪತ್ರೆಗೆ ಮಾತ್ರೆಗೆ ಎಷ್ಟು ಖರ್ಚು ಮಾಡಿದೀಯ ಅಂತ ಜೋಬಿಗೆ ಕೈ ಹಾಕಿದಾಗ ಭಿಕ್ಷುಕ ಏನ್ಸಾರ್ ಎಲ್ಲಾ ಬರೀ ದುಡ್ಡಿಂದನೇನಾ, ಇನ್ನೇನೂ ಇಲ್ವಾ. ನನಗೂ ಇಬ್ಬರು ಮಕ್ಕಳಿದಾರೆ, ಅವರೂ ಸ್ಕೂಲಿಗೆ ಹೋಗ್ತಿದಾರೆ ಅಂದು ಹೊರಟೇ ಹೋದ. ಸುಬ್ಬರಾವ್ ಭಿಕ್ಷುಕ ಹೇಳಿದ ಜೀವನದ ತತ್ತ್ವವನ್ನು ಚಿಂತಿಸುತ್ತಾ ಒಳಗೆ ಹೋದರು.

❋

## ಈ ಮಹಾನ್ ಭಾರತದಲ್ಲಿ..

- ಎಲ್ಲರೂ ತರಾತುರಿಯಲ್ಲಿರುವಂತೆ ತೋರುತ್ತದೆ ಆದರೆ ಯಾರೂ ಸರಿಯಾದ ಸಮಯಕ್ಕೆ ಬರುವುದಿಲ್ಲ.
- ನೀನು 10 ಲಕ್ಷದಲ್ಲೊಬ್ಬ ಎಂದರೂ ನಿನ್ನಂತಹವರು 1241 ಮಂದಿ ಇದ್ದಾರೆ.
- ಜನಗಳು ನೀಳಕಾಯ ಆದರೆ ಪೋಲೀಸರು ದಪ್ಪ.
- ಒನ್‌ವೇ ರಸ್ತೆ ದಾಟುವಾಗಲೂ ಸಹ ನೀವು ಎರಡೂ ಕಡೆ ನೋಡಿ ದಾಟಬೇಕು.
- ವಿಲ್ ಇದ್ದೆಡೆ ಸಂಬಂಧಿಕರು ಇರುತ್ತಾರೆ.
- ಸ್ತ್ರೀಯರು ಗರ್ಭದಲ್ಲೂ ಸುರಕ್ಷಿತವಾಗಿಲ್ಲ, ಹೊರಗೂ ಸಹ.
- ಬಹಿರಂಗವಾಗಿ ಮೂತ್ರ ಮಾಡಬಹುದು ಆದರೆ ಮುತ್ತು ಕೊಡುವ ಹಾಗಿಲ್ಲ.
- ಶ್ರೀಮಂತನಾಗಲು ರಾಜಕಾರಣಿ ಆಗಬೇಕು ಮತ್ತು ರಾಜಕಾರಣಿ ಆಗಲು ಶ್ರೀಮಂತನಾಗಿರಬೇಕು.
- ಟ್ರಾಫಿಕ್ ಸಿಗ್ನಲ್ ಕೆಲಸ ಮಾಡಬೇಕಾದರೆ ಸರ್ಕಲ್‌ನಲ್ಲಿ ಪೋಲೀಸಿನವ ನಿಂತಿರಲೇಬೇಕು.

# ತೂತಿಲ್ಲದ ದೋಸೆ

ಅದೊಂದು ಸ್ವಸಹಾಯ ಪದ್ಧತಿಯ ಸಣ್ಣ ಪ್ರಮಾಣದ ಹೋಟೆಲು. ಅಲ್ಲಿ ಸಪ್ಲೆಯರ್ರು, ಕ್ಲೀನರ್ರು, ಕುಕ್ಕು ಎಲ್ಲಾ ಮಂಜೂನೇ. ದಿನಕ್ಕೆ ತರತರದ ಗಿರಾಕಿಗಳು ಬರ್ತಾರೆ. ದುಡ್ಡು ಕೊಡದೇ ಓಡಿ ಹೋಗೋರೂ ಇರ್ತಾರೆ. ಹೀಗೇ ಒಂದಿನ ಒಬ್ಬ ಗಿರಾಕಿ ಬಂದ.

ನನಗೆ ಸೆಟ್ ದೋಸೆ ಬೇಕು ಆದರೆ ತೂತಿಲ್ಲದ ದೋಸೆ ಬೇಕು ಅಂತ ಅಂದ.

ದುಡ್ ಇಸ್ಕೊಂಡು ಮಂಜು ದೋಸೆ ಹಾಕಿ ತಂದು ಕೊಟ್ಟ

ಗಿರಾಕಿ ದೋಸೆ ಕಡೆ ನೋಡಿ ನಾನು ಕೇಳಿದ್ದು ತೂತಿಲ್ಲದ ದೋಸೆ ನೀನು ತಂದಿರೋದು ತೂತಿರೋ ದೋಸೆ. ನನಗೆ ತೂತಿಲ್ಲದ ದೋಸೆ ಬೇಕು ಇಲ್ಲದಿದ್ದರೆ ನನ್ನ ದುಡ್ಡು ವಾಪಸ್ ಕೊಡು ಅಂದ. ಮಾತಿಗೆ ಮಾತು ಬೆಳೆದು ದೊಡ್ಡ ಗಲಾಟೆನೇ ಆಯಿತು. ನಾನು ಕನ್ಸೂಮರ್ ಕೋರ್ಟಿಗೆ ಹೋಗ್ತೀನಿ ಅಂತ ಬೇರೆ ಹೆದರಿಸಿದ. ಮಂಜುಗೆ ಏನು ಮಾಡಬೇಕು ಅಂತಾನೇ ಗೊತ್ತಾಗ್ತಿಲ್ಲ.

ರೀ ಇದು ತೂತಿಲ್ಲದ ದೋಸೆನೆ ಕಣ್ರೀ ಸುಮ್ನೆ ತಿನ್ರೀ ಅಂದ.

ಅದಕ್ಕೆ ಗಿರಾಕಿ ಇದು ತೂತಿರೋ ದೋಸೆನೇ ಕಣ್ರೀ ಅಂದ.

ನಿಮಗೆ ಕನ್ನಡ ಬರುತ್ತೇನ್ರೀ. ತೂತು ಅಂದ್ರೆ ಏನು ಈ ಕಡೆಯಿಂದ ನೋಡಿದರೆ ಆ ಕಡೆ ಇರೋದು ಕಾಣಬೇಕು ಅದನ್ನು ತೂತು ಅಂತಾರೆ. ಇಂಥಾ ತೂತು ಬರೀ ದೋಸೆನಲ್ಲ ಎಲ್ಲಿ ಬೇಕಾದರೂ ಇರಬಹುದು. ಈ ದೋಸೆನಲ್ಲಿ ತೂತೆಲ್ಲಿದೆ. ಈ ಕಡೆಯಿಂದ ನೋಡಿದರೆ ಆಕಡೆ ಇರೋದು ಏನೂ ಕಾಣಲ್ವಲ್ಲ. ಅಂದ ಮೇಲೆ ನೀವು ಕೇಳಿರೋದೂ ತೂತಿಲ್ಲದ ದೋಸೆನೇ ಮಂಜು ತಂದುಕೊಟ್ಟಿರೋದೂ ತೂತಿಲ್ಲದ ದೋಸೆನೇ ಅಲ್ವಾ ಅಂದ.

ಗಿರಾಕಿ ತಬ್ಬಿಬ್ಬಾದ.

ದೋಸೆ ಮೇಲಿನ ಆಳವಾಗಿರುವ ಸಣ್ಣ ಸಣ್ಣ ಹಳ್ಳಗಳನ್ನು ತೋರಿಸಿ ಹಾಗಾದ್ರೆ ಇದು ಏನ್ರೀ ಅಂದ.

ಅದನ್ನು ಹಳ್ಳ ಅಂತಾರೆ. ಸಣ್ಣ ಸಣ್ಣ ಹಳ್ಳಗಳು. ರಸ್ತೆನಲ್ಲಿ ಇರೋಲ್ವೇನ್ರೀ ಹಳ್ಳಗಳು ಹಾಗೇ ಇದೂನೂ. ಸುಮ್ನೆ ದೋಸೆ ತಿಂದು ಎದ್ ಹೋಗಿ ಇನ್ನೆಲ್ಲೂ ಇಂಥಾ ತರ್ಲೆ ಮಾಡಬೇಡಿ ಅಂದ

ಗಿರಾಕಿ ಸುಮ್ನೆ ದೋಸೆ ತಿಂದು ಹೋಗ್ತಾ ಮತ್ತೆ ಎಲ್ಲಾರ ಮನೆ ದೋಸೆನೂ ತೂತು ಅಂತಾರಲ್ಲ ಅದು ಹೇಗೆ ಅಂತ ತನ್ನನ್ನೇ ಪ್ರಶ್ನೆ ಮಾಡಿಕೊಂಡು ಹೋದ.

ಸೋಮು ಮಂಜು ಕಡೆ ನೋಡಿ ಸುಮ್ನೆ ಕಣ್ ಮುಚ್ಕೊಂಡು ದೋಸೆ ಬಿಟ್ರೆ ಪ್ರಯೋಜನವಿಲ್ಲ ಸ್ವಲ್ಪ ಲಾಜಿಕ್ಕೂ ಕಲಿತಿರಬೇಕು ಅಂದು ಹೋದ.



**ಫೋಟೊ ಪ್ರಹಸನ**

# ಸೆಲೂನಿನಲೊಂದು ಸೆಲ್ಫಿ ಪ್ರಸಂಗ

**- ಪ್ರಶಾಂತ ಆಡೂರ**

**ಒಂ**ದ ತಿಂಗಳಾಗಿತ್ತ ದಾಡಿ ಮಾಡ್ಕೊಳಲಾರದ, ಹಂಗ ನಂಗ ದಾಡಿ ಬಿಟ್ಟರ ಏನ ಪ್ರಾಬ್ಲೇಮ್ ಇಲ್ಲಾ, ಆದರ ಅದು ನನ್ನ ಹೆಂಡ್ತಿ ಕಣ್ಣಿಗೆ ಮೈಗೆ ಎರಡಕ್ಕೂ ಚುಚ್ಚತದ, ಹಿಂಗಾಗಿ ಒಂದ ವಾರದಿಂದ ಅಕಿ ರ್‍ರಿ ದಾಡಿ ಯಾವಾಗ ಮಾಡಿಸಿಗೊಂಡ ಬರ್ತೀರಿ ಅಂತ ಒಂದ ಸಮನ ಬೆನ್ನ ಹತ್ತಿದ್ದಳು.

ಅಕಿಗೇನರ ದಾಡಿ ಮಾಡಲಿಕ್ಕೆ ಬರ್ತಿದ್ದರ ನನ್ನ ಹಿಡದ ದಾಡಿ ಮಾಡೇ ಬಿಡ್ತಿದ್ದಳು. ಆ ಮಾತ ಬ್ಯಾರೆ. ನನಗ ದಾಡಿ ಮಾಡ್ಕೊಳೋದು ಅಂದರ ಭಾರಿ ಬ್ಯಾಸರದ ಕೆಲಸ. ಹಿಂಗಾಗಿ ನಾ ವಾರಕ್ಕ ಎರಡ ಸರತೆ ದಾಡಿ ಮಾಡ್ಕೊತೇನಿ. ನಮ್ಮ ಕಾಕಾ ಹೇಳಿದಂಗ ದಿವಸಾ ದಾಡಿ ಮಾಡ್ಕೊಳೋದಕ್ಕಿಂತ ವರ್ಷಕ್ಕೊಂದ ಹಡಿಯೋದ ಛಲೋ ಅಂತ ನಂಗು ಭಾಳ ಸರತೆ ಅನಿಸೇದ. ಇನ್ನ ಹಂತಾದರಾಗ ನಾ ದಾಡಿ ಮಾಡ್ಕೊಳೋ ದಿವಸ ಏನರ ಅಮವಾಸಿ, ಹಬ್ಬ, ಹುಣ್ಣಿಮಿ ಅಂತ ನಮ್ಮವ್ವಗ ನೆನಪಾಗಿ ಇವತ್ತ ದಾಡಿ ಮಾಡ್ಕೋಬ್ಯಾಡ ಅಂದರ ನಾ ಖುಶ್ ಆಗಿ ಅವತ್ತ ಬಿಟ್ಟ ಬಿಡ್ತೇನಿ. ಹಂಗ ಒಮ್ಮೆ ದಾಡಿ ಪಾಳೆ ಇದ್ದಾಗ ಮಾಡ್ಕೋಳಿಲ್ಲಾ ಅಂದರ ಮುಗಿತ. ಅದ ಆಮ್ಯಾಲೆ ನನ್ನ ಮ್ಯಾಕ್ಸ್ ಬ್ಲೇಡಿಗೆ ಬರಂಗಿಲ್ಲಾ. ಅದರಾಗ ನಂದ ಬೆಳವಣಗಿನೂ ಛಲೋ ಅದ. ಹಂಗ ಬ್ಯಾರೆ ಬೆಳವಣಗಿ ನಿಂತಿದ್ದರು ದಾಡಿ ಮಾತ್ರ ಭಾರಿ ಬೆಳಿತಾವ. ಇನ್ನ ಹಿಂಗ ಒಮ್ಮೆ ಮನಿ ದಾಡಿ ತಪ್ಪೇದ ಅಂದ ಮ್ಯಾಲೆ ನಾ ಕಟಿಂಗ ಅಂಗಡಿಗೆ ಹೋಗೆ ಮಾಡಿಸ್ಗೋಬೇಕು. ಹಂಗ ಅಂಗಡಿ ಹೋಗೆ ಮಾಡಿಸ್ಗೋಬೇಕು ಅಂದಮ್ಯಾಲೆ ಇನ್ನೊಂದ ಸ್ವಲ್ಪ ಬರಲಿ ದಾಡಿ ಎಷ್ಟ ಇದ್ದರು ರೊಕ್ಕ ಅಷ್ಟ ಅಂತ ತಿಂಗಳಗಟ್ಟಲೇ ದಾಡಿ ಬಿಟ್ಟ ಬಿಟ್ಟಿದ್ದೆ.

ನನ್ನ ನೋಡಿದವರು ಯಾಕಲೇ ಹೆಂಡ್ತಿ ತವರ ಮನಿಗೆ ಹೋಗ್ಯಾಳಿನ ಅಂತ ಒಂದಿಷ್ಟ ಮಂದಿ ಅಂದರ ಇನ್ನೊಂದಿಷ್ಟ ಮಂದಿ ಯಾಕಪಾ, ಮತ್ತ ಮಾರನೇದ ತಯಾರ ಮಾಡಿ ಏನ್ ಅಂತ ಅನ್ನೋರ. ಇದ್ದದ್ದರಾಗ ಕೆಲವೊಂದ ಮಂದಿ ಯಾಕ ಆರಾಮ ಅದ ಇಲ್ಲೊ ಅಂತ ಕೇಳಿ ಮತ್ತ ಲಾಸ್ಟಿಗೆ ನಾಯಿಗಿಯಿ ಕಡದದೇನ್? ಅಂತ ಕೇಳೋರ. ಅವನ್ನೆಲ್ಲಾ ಕೇಳಿ ನನ್ನ ಹೆಂಡ್ತಿಗೆ ಇನ್ನು ಸಿಟ್ಟ ಬರೋದ.

ಕಡಿಕೆ ಮೊನ್ನೆ ತಲಿ ಕೆಟ್ಟ ದಾಡಿ ಮಾಡಿಸ್ಗೊಂಡ ಬರಬೇಕಂತ ನಮ್ಮವ್ವಗ ಹೇಳಲಾರದ ಸಂಜಿ ಮುಂದ ಆಫೀಸಿನಿಂದ ಸೀದಾ ಕಟಿಂಗ್ ಅಂಗಡಿಗೆ ಹೋದೆ. ಗದ್ಲ ಕಡಮಿ ಇತ್ತ ಹಿಂಗಾಗಿ ಹೋದವನ ಸೀದಾ ಕುರ್ಚಿ ಹಿಡದ ಬಿಟ್ಟೆ. ಅಂವಾ ನನ್ನ ಅವತಾರ ನೋಡಿ ಏನೇನ ಮಾಡ್ಬೇಕ ಅಣ್ಣಾ ಅಂದ. ತಲಿಗೆ 8 ನಂ. ಮಶೀನ್ ಹಚ್ಚ ಮೊದ್ಲ ಅಂದೆ. ಅಂವಾ ಹತ್ತ ನಿಮಿಷದಾಗ ಅರ್ಥ ಮಾವರ್ಸದಂತಾ ಮಶೀನ್ ಹಚ್ಚಿ ಮುಂದ? ಅಂದಾ. ನಾ ಒಂದ ಸರತೆ ಕನ್ನಡಿ ಒಳಗ ಮಾರಿ

ನೋಡ್ಕೊಂಡೆ. ಅಗದಿ ಹಸನಾಗಿ ದಾಡಿ ಬಂದಿದ್ವು, ದೀಡ ತಿಂಗಳ ಫಲವತ್ತಾದ ಪೀಕ್ ಒಮ್ಮಿಕ್ಕಲೇ ತಗಿಲಿಕ್ಕೆ ಮನಸ ಆಗಲಿಲ್ಲಾ, ಆದರು ಹೆಂಡ್ತಿ ಚುಚ್ಚತಾವ ಅಂದಿದ್ದ ನೆನಪಾಗಿ ದೋಸ್ತ್ ನೀ ಫ್ರೇಂಚ್ ಕಟ್ ಮಾಡ ಅಂತ ಹೇಳಿದೆ. ಇನ್ನೇನ ಅಂವಾ ಬ್ಲೇಡ ಹಚ್ಚ ಬೇಕ ಅನ್ನೋದರಾಗ ಒಂದ ನಿಮಿಷ ತಡಿ ಅಂತ ಮೈಮ್ಯಾಲೆ ಹಾಕ್ಕೊಂಡಿದ್ದ ಅರಬಿ ತಗದ ಒಂದ ಸರತೆ ಮೊಬೈಲನಾಗ ನನ್ನ ಹರಾ-ಭರಾ ದಾಡಿದ ಒಂದ ಸೆಲ್ಫಿ ತಕ್ಕೊಂಡ ನೀ ಕಂಟಿನ್ಯೂ ಮಾಡ ತಮ್ಮಾ ಅಂದೆ. ಅಂವಾ ಫ್ರೇಂಚ್ ಕಟ್ಟ ಮಾಡಿದಾ. ನಾನು ಒಂಥರಾ ಬುದ್ಧಿಜೀವಿ ಕಂಡಂಗ ಕಾಣಲಿಕತ್ತೆ. ಹಂಗ ಫ್ರೇಂಚ್ ಕಟ್ ಮಾರಿ ಅಗಲ ಇದ್ದೋರಿಗೆ ಇಷ್ಟ ಚಂದ ಕಾಣ್ತದ ಅಂತಾರ ಆದರ ನನ್ನ ಮಾರಿಗೂ ಛಂದ ಕಾಣಲಿಕತ್ತು. ಸರಿ, ಅದರದೊಂದ ಸೆಲ್ಫಿ ಹೊಡ್ಕಂಡ.

ತಮ್ಮಾ ನನ್ನ ಹೆಂಡತಿ ಒಟ್ಟ ದಾಡಿ ಬಿಡ ಬ್ಯಾಡರಿ ಅಂದಾಳ ನೀ ಇದನ್ನು ತಗದ ಬಿಡ. ಬರೇ ಮೀಸಿ ಒಂದ ಬಿಡ ಅಂದೆ. ಅಂವಾ ಪಾಪ ತಿದ್ದಿ ತೀಡಿ ಫ್ರೇಂಚ್ ಕಟ್ ಮಾಡಿದ್ದಾ ತಲಿಕೆಟ್ಟ ಮತ್ತ ಅದನ್ನು ಬೋಳಿಸಿ ಬರೇ ಮೀಸಿ ಅದರ ಕೆಳಗ ಒಂದ ದೃಷ್ಟಿ ಬೊಟ್ಟ ಇಟ್ಟಾ (ಹೋತಿ ಗಡ್ಡಾ). ನಾ ಮತ್ತ ಮೈಮ್ಯಾಲೆ ಹಾಕ್ಕೊಂಡಿದ್ದ ಕವದಿ ತಗದ ಮತ್ತೊಂದ ಸೆಲ್ಫಿ ಹೊಡಕೊಂಡ.

ಏ, ನನಗ ಮೀಸಿ ಸರಿ ಕಾಣಂಗಿಲ್ಲಾ, ನೀ ಒಂದ ಕೆಲಸಾ ಮಾಡ ಮೀಸಿನೂ ತಗದ ಬಿಡ ಅಂದೆ ಅವಂಗ ತಲಿ ಕೆಡ್ತ. ಅಷ್ಟರಾಗ ನನ್ನಂಗ ಮಾರಸಂಜಿ ಮುಂದ ಕಟಿಂಗ್ ಮಾಡಿಸ್ಗೊಳ್ಳೊ ಒಂದ ನಾಲ್ಕ ಗಿರಾಕಿ ಅಂಗಡ್ಯಾಗ ಬಂದ ಕೂತಿದ್ವು. ಅಂವಾ ಲೊಚ್ಚ ಅನ್ಕೋತ ಮತ್ತ ನನ್ನ ಮೈಮ್ಯಾಲೆ ಅರಬಿ ಹಾಕಿ ನನ್ನ ಮೀಸಿಗೆ ಕೈ ಹಚ್ಚಿದಾ, ಬಲಗಡೆ ಮೀಸಿ ಚೊಕ್ಕ ಕಟ್ಟ ಮಾಡಿ, ಮಾರಿ ಕ್ಲೀನ್ ಮಾಡಿ ಮೈಮ್ಯಾಲಿನ ಅರಬಿ ತಗದಾ. ನಾ ಇದೇನ ಅರ್ಧಾ ಮೀಸಿ ತಗದೆಲಾ, ಪೂರ್ತಿ ತಗಿ ಅಂದರ ಅಲ್ಲ ಅಣ್ಣಾ, ನೀ ಅದರದು ಒಂದ ಸೆಲ್ಫಿ ಹೊಡ್ಕೋ, ಆಮ್ಯಾಲೆ ಪೂರ್ತಿ ಬೋಳಸ್ತೇನಿ ಅಂತ ಗಂಟ ಬಿದ್ದಾ. ನಂಗ ತಲಿ ಕೆಟ್ಟ ಹೋತ.

ಏ, ಸುಮ್ಮನಿರಪಾ, ಎಲ್ಲೇರ ತಪ್ಪಿ ಫೇಸಬುಕ್ಕಿಗೆ ಅಪಡೇಟ್ ಆದ್ರ ಇರೋ ಒಂದ ನಾಲ್ಕ ಲೈಕ ಮರ್ಯಾದಿನೂ ಚಿಂದಿಪಾಲ ಆಗ್ತದ ಅಂತ ಅವಂಗ ಜೋರ ಮಾಡಿ ಉಳದದ್ದ ಅರ್ಧಾ ಮೀಸಿನೂ ತಗಸಿದೆ.

ಆಮ್ಯಾಲೆ ಮತ್ತೊಂದ ಸೆಲ್ಫಿ ತೊಗೊಂಡ ಅವಂಗ ನೂರ ರೂಪಾಯಿ ಕೊಟ್ಟರ ಅಂವಾ ಇಪ್ಪತ್ತ ಜಾಸ್ತಿ ಕೊಡಣ್ಣಾ, ನಾಲ್ಕ ಸೆಲ್ಫಿ ತೊಗೊಂಡಿ ಅಂತ ನೂರಾ ಇಪ್ಪತ್ತ ಇಸ್ಗೊಂಡಾ.

ನಾಲ್ಕ ಸೆಲ್ಫಿ ತೊಗೊಂಡ ನಾ ಮನಿಗೆ ಬರೋದ ತಡಾ ನನ್ನ ಹೆಂಡ್ತಿ ಖುಶ್ ಆದ್ಲು ಅಷ್ಟರಾಗ ತುಟಿ ಕೆಳಗ ಒಂದ ಸಣ್ಣ ಹೋತಿ ಗಡ್ಡ ಬಿಟ್ಟಿದ್ದ ನೋಡಿ ಏನ ಭಾಳ ಛಂದ ಇದ್ದೀರಿ ಅಂತ ಆ ದೃಷ್ಟಿ ಬಟ್ಟ ಬಿಡ್ತೀರೋ ಏನೋ ಅಂತ ತನ್ನ ರಾಗ ತಗದ್ಲು.

ಒಳಗಿಂದ ಬಂದ ನಮ್ಮವ್ವಗ ನಾ ಮಾರ ಸಂಜಿ ಹೊತ್ತ ಕಟಿಂಗ್ ಮಾಡಿಸ್ಗೊಂಡ ಬಂದಿದ್ದ ಗೊತ್ತಾಗಿ ಏನ ಮನಷ್ಯಾ ಇದ್ದಿ, ಬ್ರಾಹ್ಮರ ಮನ್ಯಾಗ ಹುಟ್ಟಿ ಬುದ್ಧಿ ಎಲ್ಲೆ ಇಟ್ಟಿ, ಯಾರನು ಮುಟ್ಟ ಬ್ಯಾಡ, ನಡಿ ಬಚ್ಚಲಕ್ಕ ಅಂತ ನಂಗ ಬಚ್ಚಲಕ್ಕ ಅಟ್ಟಿ ನಿನ್ನ ಗಂಡಗ ಮುಟ್ಟಲಾರದ ಎರಡ ತಂಬಗಿ ನೀರ ಹಾಕವಾ ಅಂತ ನನ್ನ ಹೆಂಡ್ತಿನ್ನೂ ಬಚ್ಚಲದಾಗ ದುಗಸಿದ್ಲು......ಮುಂದ?

ಮುಂದೇನ?... ನನ್ನ ಹೆಂಡ್ತಿಗೆ ದಾಡಿ ಚುಚ್ಚೋದ ಬಂದ ಆತ.